ಅರುಣಾಬ್ಜ ಕವಿನ

ಮಹಾಭಾರತೊ

ತುಳು ಮಹಾಕಾವ್ಯ

ಸಂಪಾದಕೆರ್
ಪಂಡಿತ ವೆಂಕಟರಾಜ ಪುಣಿಂಚತ್ತಾಯೆರ್



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಅರುಣಾಬ್ಜ ವಿರಚಿತ

ತುಳು ಮಹಾಭಾರತೊ

ಸಂಪಾದಕರು

ವೆಂಕಟರಾಜ ಪುಣಿಂಚತ್ತಾಯ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ,

ಮಂಗಳೂರು

2000

Tuḷu Mahaabhaarato : (Story of Mahabharata in Tulu) composed by Poet Arunabja.
Edited by
Vidwan Venkataraja Puninchattaya, 'Gayathri', P.O. Kakkebettu, Kasaragod - 671 543.
Published by
Karnataka Tulu Sahitya Academy, Lal Baug, Mangalore-575 003.

Year of Publication : 2000

Pages : 60 + ೩೭೬ [436]

Price : **Rs. 240-00**

Cover Design:
Jagajjivan Shetty, Manipal.

© All Rights Reserved.

DTP by:
'Navadurga Lasertech', C/o. Dr. K. Padmanabha Kekunnaya, Udupi-2.
Printed at:
Honna Padma Printers, Udupi-576 101.

ಗುರ್ಕಾರ್ರೆನ ಮದಿಪು

ಪಂಚದ್ರಾವಿಡ ಬಾಸೆಲೆಡ್ ಒಂಜಿ ಮಾತ್ರ ಅತ್ತ್, ಮೂಲದ್ರಾವಿಡೊಡ್ದು ಬಾರಿ ಬೇಗ ಎಗ್ಗೆ ಆದ್ ಸ್ವತಂತ್ರವಾಯಿನ ಬಾಸೆ ಪಂಡ್‌ದ್‌ಲಾ ತುಳುನು ಭಾಷಾ ವಿದ್ವಾಂಸೆರ್ನಕುಲು ಗುರ್ತ ಪತ್‌ದೆರ್. ಲಿಖಿತ ಪರಂಪರೆ ದಾಂತಿನ, ಲಿಪಿ ಇಜ್ಜಂದಿನ ಬಾಸೆ ಪಂಡ್‌ದ್ ನಮ್ಮ ಜನೊಕ್ಲೆಗ್ ಒಂಜಿ ನಮುನೆದ ನಾಲೀಸ್ ಇತ್ತಿನ ಕಾಲಲಾ ಇತ್ತ್‌ಂಡ್. ೧೫೦ ವೊರ್ಸೊಡ್ದು ಪಿರವು ಕ್ರೈಸ್ತ ಮಿಶನರಿಕ್ಕುಲು ಬೈಬಲ್, ಸುವಾರ್ತೆ --ಇಂಚಿನ ಧಾರ್ಮಿಕ ಸಾಹಿತ್ಯೊನು ತುಳು ಬಾಸೆಗ್ ಮುಗ್‌ತ್ ಪಾಡ್ಯೆರ್. ಕಂಡ ಬೊಟ್ಟುಲೆಡ್, ಕೋಲ ನೇಮೊಲೆಡ್ ಹಳ್ಳಿದ ಆಣ್ಜೊವು ಪೊಣ್ಜೊವು ಪನೊಂದಿತ್ತಿನ ಓಬೇಲೆ, ಪಾಡ್ದನ, ಸುಗಿತೊಲೆನ್ ಒಟ್ಟುಮಲ್ತ್‌ದ್ ಬೊಲ್ಪುಗು ಕಣತ್ತಿನ ಅಕ್‌ಲ್ ಪ್ರಯತ್ನೊನೇ ತುಳುನು 'ಸರವು'ಡ್ದು 'ಬರವು'ಗು ಏರಾಯಿನ ಪುಗರ್ತೆದ ಕಜ್ಜ.

ಕರಿ ಶತಮಾನದ ರಡ್ಡ್--ಮೂಜನೇ ದಶಕೊಡು ಒಡಿಪುಡು ದಿ। ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯೆರ್ನ ದುಂಬಾಳ್ತನೊಡು ನಡತ್ತಿನ ತುಳು ಚಳವಳಿಡ್ದಾತ್ರ ವಿದ್ಯಾವಂತೆರ್ನಕುಲು ತುಳುಟ್ಟು ಬರೆದ್ ಬೂಕುಲೆನ್ ಪ್ರಕಟಣೆ ಮಲ್ತೆರ್. ಆಜನೇ ದಶಕೊಡ್ದು ಬೊಕ್ಕ ನಡತ್ತಿನ ಪೊಸ ತುಳು ಚಳವಳಿದ ಪ್ರಭಾವೊಡ್ದಾತ್ರ ತುಳು ಸಾಹಿತ್ಯ ರಚನೆದ ಬೀಸ ಎಚ್ಚಾಂಡ್.

ಈ ಕಾಲೊಡು ಕೆಲವು ಚೋದ್ಯೊಲು ಉಂಡಾಯ. ಒಡಿಪುಡು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರೊಡು ತುಳುತ್ತ ಕೆಲಸೊಲು ನಡತ್‌ದ್ ಈ ಬಾಸೆಡ್ ನಿಗಂಟ್ ರಚನೆಗ್ ತೊಡಗ್ಯೆರ್. ಇತ್ತೆ ಆ ಕೆಲಸ ಮುಗಿದ್ ಲೋಕದ ಕಣ್ಣ್‌ಗ್ ತೋಜುಲೆಕ ಆಜಿ ಸಂಪುಟೊಲು ಬಾಸೆದ ಪೆರ್ಮೆನ್ ಬೆಳಗಾದ.

ರಡ್ಡನೇದಾದ್ ಕುಡ್ಲದ ಕಯಿತಲ್ದ ಮಂದಾರದ ದಿ। ಕೇಶವ ಭಟ್ರ್, 'ಮಂದಾರ ರಾಮಾಯಣ' ಮಹಾಕಾವ್ಯೊನು ರಚನೆ ಮಲ್ತ್‌ದ್ ತುಳುಭಾಷೆದ ಸಗ್ತಿನ್ ತೋಜಾದ್ ಕೊರ್ಯೆರ್. ತುಳು ವಾಲ್ಮೀಕಿ ಪಂಡ್‌ದ್ ಪುದರ್ ಪಡೆಯಿನ ಆರ್ ತುಳು ಬದ್‌ಕ್, ಸಂಸ್ಕೃತಿಲೆನ್ ಈ ಕಾವ್ಯೊದ ಮೂಲಕ ಪ್ರಕಟಮಲ್ತ್‌ದ್ ಮಹಾಕಾವ್ಯೊದ ಕಾಲ ಮುಗಿದ್‌ಜಿ ಪಣ್ಪಿನೆನ್ಲಾ ತೋಜಾದ್ ಕೊರ್ತೆರ್. ಮಂದಾರ ರಾಮಾಯಣ, ಭಾರತೀಯ ಸಾಹಿತ್ಯೊಡೇ ಒಂಜಿ ಮಲ್ಲ ಘಟನೆ ಪಂಡ್‌ದ್ ವಿದ್ವಾಂಸೆರ್ ಗುರ್ತ ಮಲ್ತೆರ್.

ಮೂಜನೇದಾದ್, ತುಳುತ್ತ ಸಾಹಿತ್ಯ ಚರಿತ್ರೆ ಬಜೀ ೧೫೦ ವರ್ಸ ಅತ್ತ್; ತುಳು ಬಾಸೆಗ್ ಸ್ವಂತ ಲಿಪಿ ಇಜ್ಜಿ ಪಣ್ಪಿನವು ಸರಿಯತ್ತ್ ಪಂಡ್‌ದ್ ತೋಜಾದ್ ಕೊರ್ಪಿ ಕೆಲಸ ನಡತ್‌ಂಡ್. ನೆತ್ತ ಮುನ್ನುಡಿಡ್ ಸನ್ಮಾನ್ಯ ವಿವೇಕ ರೈಕ್ಕುಲು ಪಂಡಿಲೆಕ ತುಳು ಸಾಹಿತ್ಯ ಸಂಶೋಧನೆದ ಒರಿ ಅವಧೂತ ಲೆಕ ರಾತ್ರೆ ಪಗೆಲ್

ಬೆನೊಂದುಪ್ಪುನ ಪಂಡಿತ ವೆಂಕಟರಾಜ ಪುಣಿಂಚತ್ತಾಯೆರ್ನ ಸಾಹಸ, ಸಾರಸಾರ ತಾರಿದ ಓಲೆಲೆದ ನಡುಟ್ಟು ಪೆಜಿದ್, ಓದುದು ಇತೊರ್ತೇ ಆರ್ ಭಾಗವತೊ, ಕಾವೇರಿ, ದೇವೀಮಹಾತ್ಮೆ ಪಣ್ಪೆ ಪಿರಾಕ್‌ದ ಮೂಜಿ ತುಳು ಗ್ರಂಥೊಲೆನ್ ಬೊಳ್ಪುಗು ಕಣತ್ತೆರ್. ಮಲೆಯಾಳದ ಮೂಲ ತುಳು ಲಿಪಿ. ಅರಸುಲೆನ ಲಿಪಿಯಾದ್ ಅವು ಒಂಜೀತ್ ಯೆತ್ಯಾಸೊಡು ಮಲೆಯಾಳ ಪಣ್ಪೆ ಪುದರ್ ಗೆತೊಂಡು. ಕನ್ನಡೊನೇ ಅವಲಂಬನೆ ಮಲ್ತಿನ ನಮ್ಮ ಜನೊಕ್ಕುಲು ಕನ್ನಡ ಲಿಪಿಟ್ಟೇ ತುಳು ಸಾಹಿತ್ಯ ರಚನೆ ಮಲ್ತೆರ್.

ಶ್ರೀ ಪುಣಿಂಚತ್ತಾಯೆರ್ ಸಾಧನೆ ಮಲ್ತಿನ ಕಾರಣೊಡು ತಿಕ್ಕಿನ ಮಲ್ಲ ಗ್ರಂಥನೇ 'ಮಹಾಭಾರತೊ' ಪಣ್ಪಿನ ಈ ತುಳು ಮಹಾಕಾವ್ಯ. ಈತ್ ಮಲ್ಲ ಕೊಪ್ಪರಿಗೆ ಓಲೋ ಕಣ್ಣ್‌ತಪ್ಪಾದ್ ಮದೆತಿತ್ತ್ಂಡ್. ಇಂಚಿತ್ತಿನ ನನ ಏತ್ ಕಾವ್ಯೊಲು ಏರ್ನ ಅಟ್ಟೊಡು, ಒಲ್ತ ಕೊಟ್ಯೊಡು ಉಂಡೋ! ಏತ್ ನಾಶ ಆತ್ಂಡೋ ತೆರಿಯಂದ್. ಆಂಡ ಈತ್ ಮಲ್ಲ ಕಾವ್ಯ ಇತ್ತಿನ ಒಂಜಿ ಬಾಸೆ ಒರನೇ ಸಾಹಿತ್ಯ ಪರಂಪರೆನ್ ಕಳೆವೊಂದು ತುಳುವೆರ್ ಅನಾಥ ಪ್ರಜ್ಞೆಡ್ ನರೆಲಿಯೆರೆ ಒದಗಿ ಕಾರಣೊನು ನೆನೆತ್ಂಡ ಜಿಂಜಿ ಬೇಜಾರಾಪುಂಡು. ಕೊಪ್ಪರಿಗೆ ಕೊಪ್ಪರಿಗೆಲೆನ್ ಮಣ್ಣ್‌ದಡಿಟ್ ಕೌಂತು ದೀದ್, ನಾಲ್ ಜನಟ ಬಿಕ್ಕೆ ನಟ್‌ದ್ ಬದ್‌ಕ್ ನಡಪಾವುನ ಸ್ತಿತಿ ತುಳುವೆರೆಗ್ ಬತ್ತ್ಂಡತ್ತಾ ಪಣ್ಪೆ ಸಂಕಡಲಾ ಆಪುಂಡು.

ಇಂಚಿನ ಒಂಜಿ ಅಜ್ಞಾನದ ಕತ್ತಲೆನ್ ಕಳೆದ್ ತುಳು ಬಾಸೆನ್ ಬೇತೆ ಬೇತೆ ವಿದ್ವಾಂಸೆರ್ ಪುಗರ್‌ದಿನೆಕ್ಕ್ ಸರಿಯಾಯಿ ಯೇಗಿತೆ ಈ ಬಾಸೆಗುಂಡುಂದು ನಮ್ಮ ವಿದ್ವಾಂಸ ಪರಂಪರೆನ್ ತೋಜಾದ್ ಕೊರಿನ ಪಂಡಿತ ಪುಣಿಂಚತ್ತಾಯೆರ್ ತುಳುವೆರ್ನ ಮಿತ್ತ್ ರುಣತ್ತ ಪುದೆ ದೀತೆರ್. ಬೇತೆ ವಿದ್ವಾಂಸೆರ್ನಕುಲ್ಲಾ ಈ ಕಡೆಕ್ಕ್ ಒಂತೆ ಮನಸ್ಸ್ ಕೊರೊಡು. ಅಕ್ಲುಲಾ ಪ್ರಯತ್ನ ಮಲ್ತೆರ್‌ಡ ನನಲಾತ್ ಗ್ರಂಥೊಲು ತಿಕ್ಕುನೆಕ್ಕ್ ಅಲ್ಮಾನ ಇಜ್ಜಿಂದ್ ಎನ್ನ ಮನಸ್ಸ್ ಪಣ್ಪುಂಡು.

ಈ ಗ್ರಂಥೊನು ಪ್ರಕಟಮಲ್ಪುನವು ಮಾಮಲ್ಲ ಜವಾಬ್ದಾರಿದ ಕೆಲಸ. ತುಳುವೆರ್ನ ಭಾಷಾಭಿಮಾನ ಬೊಕ್ಕ ಅಕುಲು ಕೊರ್ಪಿ ಬೆರಿಸಹಾಯೊನು ನಂಬುದು ಈ ಕೆಲಸೊಗು ಅಕಾಡೆಮಿ ಕೈ ಪಾಡ್‌ದ್ಂಡ್.

ಆಯಿನಾತ್ ಬೇಗ ಆವೊಡಾಯಿ ಕೆಲಸ ಪಂಡ್‌ದ್ ಅಪಗಪಗ ವಿಚಾರ ಮಲ್ತೊಂದಿತ್ತಿನ ಶ್ರೀ ಅಮೃತ ಸೋಮೇಶ್ವರ ಬೊಕ್ಕ ಉಂದೆನ್ ಮಲ್ಪುಗ, ಎನ್ನ ಸಹಾಯ ಉಂಡುಂದು ಬೆರಿಬೊಟ್ಟಿನ ಇತ್ತೆ ಅಕಾಡೆಮಿದ ಸದಸ್ಯೆಲಾ ಆದುಪ್ಪುನ ಶ್ರೀ ದರ್ಭೆ ಕೃಷ್ಣಾನಂದ ಚೌಟೆರೆಗ್ ಯಾನ್ ಅಕಾಡೆಮಿದ ಪರವಾದ್ ಸೊಲ್ಮೆ ಸಂದಾವೆ.

ಈ ಮಹಾಕಾವ್ಯೊನು ನಾಡ್‌ಪತ್‌ದ್, ಸಂಶೋಧನೆ ಮಲ್ತ್‌ದ್ ಅಮೂಲ್ಯ ವಾಯಿನ ಪ್ರಸ್ತಾವನೆ, ಟಿಪ್ಪಣಿ, ಅರ್ಥಕೋಶ ತಯಾರ್‌ಮಲ್ತ್‌ದ್ ಕೊರಿನ ಪಂಡಿತ ಶ್ರೀ ವೆಂಕಟರಾಜ ಪುಣಿಂಚತ್ತಾಯೆರೆಗ್ ಮಾತ ತುಳುವೆರ್ಲಾ ರುಣಿಕ್ಕುಲು. ಉಂದೆನ್ ಪ್ರಕಟಮಲ್ಪರೆ ಅಕಾಡೆಮಿಗ್ ಒಪ್ಪಾಯಿನ ಅರೆಗ್ ಸೊಲ್ಮೆಲು. ಅರೆಗ್ ಆರೋಗ್ಯಸಮೇತ ದೀರ್ಘಾಯುಷ್ಯ, ಬೊಕ್ಕ ಸೊರ್ದಯದ ಬದ್‌ಕ್ ಒದಗಡ್. ಅರೆಡ್ದ್ ನನಲಾತ್ ತುಳುತ್ತ ಬೇಲೆ ಆವಡ್. ಈ ಕಾವ್ಯಪ್ರಕಟಣೆಡ್ದಾತ್ರ ಅರೆಗ್ ವಿದ್ವತ್‌ಪ್ರಪಂಚೊಡು ಹೆಚ್ಚಿನ ಸ್ಥಾನಮಾನ ಒದಗಡ್ ಪಂಡ್‌ದ್ ಯಾನ್ ಅಪೇಕ್ಷೆ ಮಲ್ಪುವೆ.

ಅಕಾಡೆಮಿದ ಸುರುತ್ತ ಗುರ್ಕಾರೆರಾದಿತ್ತಿನ ತುಳು-ಕನ್ನಡ ಬಾಸೆಲೆದ ಮಲ್ಲ ವಿದ್ವಾಂಸೆ ಪ್ರೊ। ವಿವೇಕ ರೈಕ್ಕುಲು ವಿದ್ವತ್ತ್‌ಡ್ ಕೂಡ್ದಿಂಚಿನ, ಮುನ್ನುಡಿ ಬರೆದ್ ಕೊರ್ತೆರ್. ಅರೆಗ್ ಉಡಲ್ ದಿಂಜಿ ಸೊಲ್ಮೆಲು.

ಈ ಬೂಕುದ ಮಿತ್ತ್‌ದ ಮೋಕೆಡ್ ಬೊಕ್ಕ ಪುಣಿಂಚತ್ತಾಯೆರ್ನ ಮಿತ್ತ ಅಭಿಮಾನೊಡು ಉಂದೆನ್ ಡಿಟಿಪಿ ಟೈಪ್‌ಮಲ್ತ್ ಕೊರಿನತ್ತಂದೆ ಪುಣಿಂಚತ್ತಾಯೆರ್ನ ಪರಿಚಯಲೇಖನ ಬರೆದ್‌ಕೊರಿನ ಡಾ। ಪದ್ಮನಾಭ ಕೇಕುಣ್ಣಾಯೆರೆಗ್, ಪೊರ್ಲುದ ಪೊದಿಕೆ ಬರೆದ್‌ಕೊರಿನ ಕಲಾವಿದೆ ಶ್ರೀ ಜಗಜ್ಜೀವನ ಶೆಟ್ರೆಗ್, ಪೊರ್ಲುಡು ಅಚ್ಚಿಮಲ್ತ್ ಕೊರಿನ ಹೊನ್ನಪದ್ಮ, ಉಡುಪಿ ನೆತ್ತ ಮಾಲಕೆ ಶ್ರೀ ಪ್ರಶಾಂತ ಶೆಟ್ರೆಗ್ ಬೊಕ್ಕ ಕೆಲಸಗಾರೆರೆಗ್ ಅಕಾಡೆಮಿದ ಪುದರ್‌ಡ್ ಸೊಲ್ಮೆಲು.

ಬೂಕು ನಿಕ್ಲೆ ಕೈಟ್ಟ್ ದೀತ. ದೆತೊಂದು ಓದುನ, ಓದುದು ಬೆರಿಸಹಾಯ ಕೊರ್ಪಿನ ತುಳುವೆರೆಗ್ ಸೇರಿನವು. ತುಳುಬಾಸೆಗ್ ಮಿತ್ತ್‌ದ ಮಣೆಮರ್ಯಾದಿ ತಿಕ್ಕೊಡುಂದು ತುಳುವೆರ್ ಪುಣೆಪಿನ ಈ ಕಾಲೊಡು ಎಡ್ಡೆಂತಿ ಸಾಹಿತ್ಯ ಪ್ರಕಟನೆ-ಪ್ರಚಾರ ಬಾರೀ ಅಗತ್ಯ ಪಂಡ್‌ದ್ ತೆರಿದ್ ಬೆರಿಸಹಾಯ ಕೊರೊಡುಂದು ತುಳು ಅಭಿಮಾನಿಲೆಡ ಕುಡೊರ, ಬೊಕ್ಕೊರ ಕೇಂಡೊಣುವೆ.

ಕುಡ್ಲ
ಪತ್ತನಾಜೆ (ಬೇಸ ೧೦)
24-05-2000

ಅ. ಬಾಲಕೃಷ್ಣ ಶೆಟ್ಟಿ ಪೊಳಲಿ
ಗುರ್ಕಾರೆ.

ಕೃತಜ್ಞತೆಗಳು

ಈ ತುಳು ಮಹಾಭಾರತದ ತಾಳೆಗರಿ ಗ್ರಂಥವನ್ನು ಶತಮಾನಗಳ ಕಾಲ ಹಾಳಾಗದಂತೆ ಸಂರಕ್ಷಿಸಿಕೊಂಡು ಬಂದವರು ಪುತ್ತೂರು ತಾಲೂಕಿನ ನೆಟ್ಟನಿಗೆ ಮೂಡನೂರು ಗ್ರಾಮದ ಮುಂಡ್ಯ ಶ್ರೀ ಲಕ್ಷ್ಮೀನಾರಾಯಣ ಕೇಕುಣ್ಣಾಯರ ಪೂರ್ವಜರು. ಅವರಂತೆ ಈ ತಾಡವಾಲೆಯನ್ನು ಜಾಗ್ರತೆಯಾಗಿ ಇದುವರೆಗೆ ಕಾಪಾಡಿಕೊಂಡು ಬಂದ ಮುಂಡ್ಯ ಶ್ರೀ ಲಕ್ಷ್ಮೀನಾರಾಯಣ ಕೇಕುಣ್ಣಾಯರಿಗೆ ಮತ್ತು ಸಂಶೋಧನೆಯ ಸಲುವಾಗಿ ಈ ಗ್ರಂಥವನ್ನು ನಮಗೆ ಒದಗಿಸಿಕೊಟ್ಟ ಮುಂಡ್ಯ ಶ್ರೀ ಶಿವರಾಮ ಕೇಕುಣ್ಣಾಯರಿಗೆ ಹಾಗೂ ಗ್ರಂಥಸಂಗ್ರಹಕಾರ್ಯದಲ್ಲಿ ಸಹಕರಿಸಿದ ನನ್ನ ಅಳಿಯ ಶ್ರೀ ಪೆರ್ನಾಜೆ ರವಿಶಂಕರ ಕಲ್ಲೂರಾಯರಿಗೆ ನನ್ನ ಮೊದಲ ಕೃತಜ್ಞತೆಗಳು ಸಲ್ಲುತ್ತವೆ. ಇಂತಹ ಅಮೂಲ್ಯ ಕೃತಿಯೊಂದು ಲಭ್ಯವಾದ ಮಾಹಿತಿ ದೊರೆತೊಡನೆ, ಅದಕ್ಕೆ ಸರ್ವವಿಧದ ಸಹಕಾರ ನೀಡಲು ಮುಂದೆ ಬಂದ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಆಗಿನ ಅಧ್ಯಕ್ಷರಾದ ಪ್ರೊ| ಬಿ. ಎ. ವಿವೇಕ ರೈಯವರಿಗೆ ಹಾಗೂ ಅಕಾಡೆಮಿಯ ರಿಜಿಸ್ಟ್ರಾರರಾದ ಡಾ| ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರಿಗೆ, ಕಂಪ್ಯೂಟರಿನ ಮೂಲಕ ಇದರ ಕರಡುಪ್ರತಿಯನ್ನು ತಯಾರಿಸಲು ಸಹಕರಿಸಿದ ಡಾ| ಪದ್ಮನಾಭ ಕೇಕುಣ್ಣಾಯರಿಗೆ ಹಾಗೂ ಉಡುಪಿಯ ಗೋವಿಂದ ಪೈ ಸಂಶೋಧನ ಕೇಂದ್ರದ ಆಶ್ರಯದಲ್ಲಿ ಇದ್ದುಕೊಂಡು ಈ ಕೆಲಸವನ್ನು ನಿರ್ವಹಿಸಲು ನನಗೆ ಅನುಮತಿಯಿತ್ತ ಕೇಂದ್ರದ ನಿರ್ದೇಶಕರಾದ ಶ್ರೀ ಹೆರಂಜೆ ಕೃಷ್ಣ ಭಟ್ಟರಿಗೆ, ಈ ಕಾವ್ಯದಲ್ಲಿರುವ ಜಾತಕಪದ್ಯವನ್ನು ಪರಿಶೀಲಿಸಿ, ಸೂಕ್ತ ಮಾಹಿತಿಯನ್ನಿತ್ತು ಸಹಕರಿಸಿದ ಖ್ಯಾತ ಜ್ಯೋತಿಷಿಗಳೂ ಖಗೋಳಶಾಸ್ತ್ರಜ್ಞರೂ ಆದ ಶ್ರೀ ಕರಿಂಕ ವೆಂಕಟರಮಣ ಬನ್ನಿಂತಾಯರಿಗೆ, ನನ್ನ ತುಳು ಸಾಹಿತ್ಯಸೇವೆಯನ್ನು ಮೆಚ್ಚಿ ಪ್ರೋತ್ಸಾಹ ನೀಡಿದ ಖ್ಯಾತ ತುಳು ಸಾಹಿತಿ ಶ್ರೀ ಡಿ. ಕೆ. ಚೌಟ ಅವರಿಗೆ, ನನ್ನ ಎಲ್ಲ ಗ್ರಂಥಸಂಪಾದನೆಯ ಕಾರ್ಯದಲ್ಲಿಯೂ ಸದಾ ನನ್ನೊಂದಿಗೆ ಸಹಕರಿಸುತ್ತಾ ಬಂದಿರುವ ನನ್ನಾಕೆ ಶ್ರೀಮತಿ ವನಿತಾ ಹಾಗೂ ನನ್ನೆಲ್ಲ ತುಳು ಸಾಹಿತ್ಯ ಚಟುವಟಿಕೆಗಳಿಗೂ ಸದಾ ಸ್ಫೂರ್ತಿ ನೀಡುತ್ತಾ ಬಂದಿರುವ ಹಿರಿಯರಾದ ಪ್ರೊ| ಕು. ಶಿ. ಹರಿದಾಸ ಭಟ್ಟ ಮತ್ತು ಶ್ರೀ ಅಮೃತ ಸೋಮೇಶ್ವರ –ಅವರಿಗೆ ಹಾಗೂ ಈ ಗ್ರಂಥದ ಪ್ರಕಟಣೆಯ ಭಾರವನ್ನು ಹೊತ್ತ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಅ. ಬಾಲಕೃಷ್ಣ ಶೆಟ್ಟಿ, ಪೊಳಲಿ –ಅವರಿಗೂ ಸಹ ನನ್ನ ಅನಂತ ಕೃತಜ್ಞತೆಗಳು ಸಲ್ಲುತ್ತವೆ.

– ವೆಂಕಟರಾಜ ಪುಣಿಂಚತ್ತಾಯ

ಮುನ್ನುಡಿ

ತುಳು ಸಾಹಿತ್ಯ ಚರಿತ್ರೆಯಲ್ಲಿ ಅರುಣಾಬ್ಜ ಕವಿ ರಚಿತ ತುಳು 'ಮಹಾಭಾರತೊ' ತುಳು ಕಾವ್ಯದ ಪ್ರಕಟಣೆ ಒಂದು ಐತಿಹಾಸಿಕ ಘಟನೆ. ಶ್ರೀ ಭಾಗವತೊ, ಕಾವೇರಿ, ದೇವೀಮಹಾತ್ಮೆ ಎಂಬ ಮಹಾಕಾವ್ಯಗಳನ್ನು ಶೋಧಿಸಿ ತುಳು ಪ್ರಾಚೀನ ಮಹಾಕಾವ್ಯಗಳ ಭಂಡಾರದ ಬೀಗಮುದ್ರೆಯನ್ನು ಒಡೆದ ತುಳು-ಕನ್ನಡದ ಹಿರಿಯ ಕವಿ ವಿದ್ವಾಂಸರಾದ ಶ್ರೀ ವೆಂಕಟರಾಜ ಪುಣಿಂಚತ್ತಾಯರು ತುಳು ಮಹಾಭಾರತೊ ಕಾವ್ಯದ ಹಸ್ತಪ್ರತಿಯನ್ನು ಶೋಧಿಸಿ ಸಂಪಾದಿಸಿ ಮಹತ್ವದ ಸಾಧನೆಯನ್ನು ಮಾಡಿದ್ದಾರೆ. ತಮ್ಮ ಸಂಪಾದನೆಯ ಪ್ರಸ್ತಾವನೆಯಲ್ಲಿ ಕಾವ್ಯದ ಕುರಿತು ಕವಿಚರಿತ್ರೆ ಮತ್ತು ಕೃತಿ ಅಧ್ಯಯನ ಮಾಡಿ ಕಾವ್ಯಾಭ್ಯಾಸಕ್ಕೆ ಉತ್ತಮ ಪ್ರವೇಶಿಕೆಯನ್ನು ಒದಗಿಸಿದ್ದಾರೆ.

ತುಳುಮಹಾಭಾರತೊ ಅನೇಕ ದೃಷ್ಟಿಗಳಿಂದ ಕನ್ನಡ ಮಹಾಭಾರತಕ್ಕಿಂತ ಭಿನ್ನವಾಗಿ ವಿಶಿಷ್ಟವಾಗಿದೆ. ಪುಣಿಂಚತ್ತಾಯರು ಅಂತಹ ವಿಶಿಷ್ಟ ಸನ್ನಿವೇಶಗಳನ್ನು ವಿವರವಾಗಿ ವಿಮರ್ಶಿಸಿದ್ದಾರೆ. ಸಂಸ್ಕೃತ ಕಾವ್ಯಪರಂಪರೆಯ ಶಾಸ್ತ್ರಮಾರ್ಗದ ನೆರಳಿನಲ್ಲಿ ಹುಟ್ಟಿಯೂ ತುಳು ಮಣ್ಣಿನ ಜೀವಸತ್ವವನ್ನು ಮೈಗೂಡಿಸಿಕೊಂಡಿರುವ ತುಳು ಮಹಾಭಾರತೊ ತುಳು ಭಾಷೆ, ಸಂಸ್ಕೃತಿ ಮತ್ತು ಆಲೋಚನಾ ವಿಧಾನಗಳ ದೃಷ್ಟಿಯಿಂದ ಮುಖ್ಯವಾದುದು. ಹಾಗೆಯೇ ಕನ್ನಡ ಮತ್ತು ಸಂಸ್ಕೃತ ಮಹಾಭಾರತಗಳೊಂದಿಗೆ ತೌಲನಿಕವಾಗಿ ಅಧ್ಯಯನ ಮಾಡಲು ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಈಗ ದೊರೆತಿರುವಷ್ಟು ಪ್ರಮಾಣದಲ್ಲಿ ಈ ಕಾವ್ಯ ಅಪೂರ್ಣವಾಗಿದ್ದರೂ ಸಿಕ್ಕಿರುವಷ್ಟು ಭಾಗಗಳ ಅಧ್ಯಯನದಿಂದಲೇ ಸಮಗ್ರ ಕಾವ್ಯದ ರಚನೆ ಮತ್ತು ನೋಟವನ್ನು ಅರ್ಥಮಾಡಿಕೊಳ್ಳಲು ಅವಕಾಶವಿದೆ. ಭಾಷಾಪ್ರಯೋಗದ ದೃಷ್ಟಿಯಿಂದ ಇದುವರೆಗೆ ದೊರೆತಿರುವ ಕಾವ್ಯಗಳಿಂದ ಭಿನ್ನವಾದ ರೂಪಗಳು ಕಾಣಿಸಿಕೊಳ್ಳುವುದು ತುಳುಕಾವ್ಯದ ಮುಚ್ಚಿಹೋದ ಪರಂಪರೆಯೊಂದನ್ನು ಮರಳಿ ಪಡೆಯುವ ದೃಷ್ಟಿಯಿಂದ ಬಹಳ ಉಪಯುಕ್ತವಾಗಿದೆ. ಈ ಕಾವ್ಯದ ಛಂದಸ್ಸುಗಳ ಪ್ರಯೋಗ ಕುತೂಹಲಕಾರಿಯಾಗಿದೆ. ಅಂಶಗಣದ ಷಟ್ಪದಿ ಮತ್ತು ಖ್ಯಾತ ಕರ್ನಾಟಕಕ್ಕೆ ಹೊರತಾದ ವೃತ್ತಗಳು ಬಳಕೆಯಾಗಿರುವುದು ಮತ್ತು ವೃತ್ತಗಳಲ್ಲೂ ನಡೆ ಮತ್ತು ಲಯಗಳೇ ಮುಖ್ಯವಾಗಿರುವುದು ವಿಶೇಷವಾದುದು. ಈ ತುಳು ಕವಿಯು ತುಳು ಮಹಾಕಾವ್ಯಕ್ಕೆ ಹೊಸತೊಂದು ಛಂದೋರೂಪವನ್ನು ಹುಡುಕುವ ಪ್ರಯತ್ನ ಮಾಡಿದನೇ ಅನ್ನುವುದು ಅನ್ವೇಷಿಸಬೇಕಾದ ಅಂಶ. ಹೀಗೆ ಭಾಷೆ, ಛಂದಸ್ಸು, ವಸ್ತು, ಪಾತ್ರಚಿತ್ರಣ ಧೋರಣೆಗಳ ದೃಷ್ಟಿಯಿಂದ ಇದು ಖಂಡಿತವಾಗಿಯೂ ತುಳುವಿನ ಆದಿಕಾವ್ಯ.

ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯರು ತುಳುಸಾಹಿತ್ಯ ಸಂಶೋಧನೆಯ ಒಬ್ಬ ಅವಧೂತ. ಅವರ ಕಣ್ಣಿನ ಆರೋಗ್ಯ, ದೇಹದ ದಣಿವು ಎಲ್ಲವನ್ನೂ ಲೆಕ್ಕಿಸದೆ ಅವರು ಓಲೆಗರಿಗಳನ್ನು ಬೆನ್ನಟ್ಟಿಕೊಂಡು ಅಲೆಯುತ್ತಾರೆ. ಯಾರ ಕಣ್ಣಿಗೂ ಬೀಳದ ತಾಡವಾಲೆಗಳು ಪುಣಿಂಚತ್ತಾಯರ ಜ್ಞಾನಚಕ್ಷುವಿನ ನೋಟ ದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಒಮ್ಮೆ ಅದು ಸಿಕ್ಕರೆ ಸಾಕು ಅದರ ಗರಿಗಳನ್ನು ಮಗುವಿನ ಮುದ್ದು ಕೈಗಳನ್ನು ಎತ್ತಿದಂತೆ ಎತ್ತಿ ಅಲ್ಲಿಯ ಬರಹಗಳ ಮೇಲೆ ಕೈಯಾಡಿಸಿ ಕಣ್ಣುಜೋಡಿಸಿ ಅವರು ಧ್ಯಾನಸ್ಥರಾಗುತ್ತಾರೆ. ಇಂತಹ 'ತಾಡವಾಲೆ ವಾಲ್ಮೀಕಿ' ಇರುವುದರಿಂದಲೇ ತುಳುವರಿಗೆ ತಮ್ಮ ಸಾಹಿತ್ಯಪರಂಪರೆಯನ್ನು ಅಭಿಮಾನದಿಂದ ಹೇಳಿಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿಯೇ ಶ್ರೀ ಪುಣಿಂಚತ್ತಾಯರಿಗೆ ಎಲ್ಲ ತುಳುವರೂ ಎಲ್ಲ ಕಾಲಕ್ಕೂ ಋಣಿಗಳಾಗಿರಬೇಕು.

ಇಂತಹ ಬೃಹತ್ ಕಾವ್ಯದ ಮಹತ್ತರ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತುಕೊಂಡ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ತುಳುವರೆಲ್ಲರ ಕೃತಜ್ಞತೆಗೆ ಪಾತ್ರವಾಗಿದೆ. ಭುವನದ ಭಾಗ್ಯದಿಂದ ತುಳುಮಹಾಭಾರತ ಪ್ರಕಟ ವಾಗುತ್ತಿರುವ ಸಂದರ್ಭದಲ್ಲಿ ಅಕಾಡೆಮಿಯ ಈ ಸಾಹಸಕ್ಕೆ ಕೇವಲ ತಲೆದೂಗಿದರೆ ಸಾಲದು; ಪುಸ್ತಕವನ್ನು ಕೊಂಡು ಆಡಿ ತುಳುವರು ತಮ್ಮ ಭಾಷೆಯ ಋಣವನ್ನು ತೀರಿಸಬೇಕು. ಆಸಕ್ತರು ಈ ಕಾವ್ಯದ ಕುರಿತು ಅಧ್ಯಯನ ನಡೆಸಬೇಕು. ಭಾರತೀಯ ಮಹಾಕಾವ್ಯಗಳ ದೊಡ್ಡ ಶ್ರೇಣಿಯ ಹಾರದಲ್ಲಿ ತುಳು ಮಹಾಭಾರತದ ಮಣಿಯೊಂದು ಸೇರಿ ಬೆಳಗಲಿ ಎಂದು ಹಾರೈಸುತ್ತೇನೆ.

ಮಂಗಳೂರು
೨೮-೪-೨೦೦೦

ಪ್ರೊ। ಬಿ. ಎ. ವಿವೇಕ ರೈ



ಶ್ರೀ ಪುಂಡೂರು ವೆಂಕಟರಾಜ ಪುಣಿಂಚತ್ತಾಯರು ೧೦-೧೦-೧೯೩೬ರಂದು ಜನ್ಮವೆತ್ತಿದರು. ಹುಟ್ಟಿನಿಂದಲೇ ಪ್ರತಿಭಾನ್ವಿತರಾಗಿದ್ದ ಇವರು ಜೀವನ ನಿರ್ವಹಣೆಗಾಗಿ ಆರಿಸಿಕೊಂಡ ವೃತ್ತಿ ಅಧ್ಯಾಪನ; ಮನಸ್ಸಂತೋಷಕ್ಕಾಗಿ ತೊಡಗಿಸಿಕೊಂಡ ಪ್ರವೃತ್ತಿ ಸಂಶೋಧನ. ಎಡನೀರಿನ ಸ್ವಾಮೀಜಿಯವರ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದುಕೊಂಡು ಇವೆರಡನ್ನೂ ಸಾಧಿಸಿದರು. ಅಧ್ಯಾಪಕರಾಗಿ ನಿವೃತ್ತರಾದರೂ ಸಂಶೋಧಕರಾಗಿ ಇನ್ನೂ ಪ್ರವೃತ್ತರು. ಇವರು ಸಂಸ್ಕೃತ, ಕನ್ನಡ, ತುಳು, ಮಲಯಾಳಂ, ಇಂಗ್ಲಿಷ್, ತಮಿಳು, ಹಿಂದೀ, ಕೊಡವ ಮುಂತಾದ ಭಾಷೆಗಳನ್ನು ತಲಸ್ಪರ್ಶಿಯಾಗಿ ಬಲ್ಲ ಬಹುಭಾಷಾ ವಿದ್ವಾಂಸರು.

ಶ್ರೀ ಪುಣಿಂಚತ್ತಾಯರು ಮೊದಮೊದಲಿಗೆ ತಮ್ಮ ಹಜ್ಜೆಗುರುತುಗಳನ್ನು ಮೂಡಿಸಿದ್ದು ಕವಿಯಾಗಿ. ಸಂಸ್ಕೃತ, ಕನ್ನಡ, ತುಳು ಮೊದಲಾದ ಭಾಷೆಗಳಲ್ಲಿ ಇವರ ಕಾವ್ಯರಸಗಂಗೆ ಧಾರೆವರಿದಿದೆ. 'ಶೈಲೂಷಿ', 'ಜೋಕಾಲಿ', 'ಆಲಡೆ', 'ಅಕ್ಷರಯಾತ್ರೆ', 'ಸುಭಾಷಿತಲಹರಿ' ಇತ್ಯಾದಿ ಇವರ ಕಾವ್ಯಕೃತಿಗಳು. 'ಮೊಗವೀರ ಸಂಸ್ಕೃತಿ', 'ಕೇರಳದ ವರ್ಣಚಿತ್ರಲೋಕ', 'ತುಳು ನಡೆ-ನುಡಿ' ಮೊದಲಾದವು ಇವರ ಗದ್ಯಕೃತಿಗಳು. 'ನಚಿಕೇತ', 'ಬೇಡನ ಮಗಳು' ಮೊದಲಾದವು ನಾಟಕಗಳು. ಇವೆಲ್ಲ ಪ್ರಕಟವಾಗಿವೆ. ಪ್ರಕಟವಾಗದವುಗಳ ಸಂಖ್ಯೆ ಇವುಗಳ ದುಪ್ಪಟ್ಟು. ಪ್ರಕಟಿತಾಪ್ರಕಟಿತ ಲೇಖನಗಳ ಸಂಖ್ಯೆ ನೂರಾರು. ಯಕ್ಷಗಾನ, ಮಕ್ಕಳ ಸಾಹಿತ್ಯ ಮೊದಲಾದುವು ಇವರು ಕಯ್ಯಾಡಿಸಿದ ಇತರ ಕ್ಷೇತ್ರಗಳು.

ಇದು ಶ್ರೀ ಪುಣಿಂಚತ್ತಾಯರ ಪ್ರತಿಭೆಯ ಒಂದು ಮುಖ. ಇನ್ನೊಂದು ಮುಖ ಅವರ ಸಂಶೋಧಕತ್ವ. ಮನೆಮನೆಗೆ ತಿರುಗಿ ಹಳೆಯ ತಾಡವಾಲೆಗಳನ್ನು

ಪರಿಶೀಲಿಸುವ ಹವ್ಯಾಸವನ್ನು ಬೆಳೆಸಿಕೊಂಡ ಸಂದರ್ಭದಲ್ಲಿ ದೊರೆತುದು 'ಶ್ರೀ ಭಾಗವತೊ' ಎನ್ನುವ ತುಳು ಮಹಾಕಾವ್ಯ. ಏಕೈಕ ಹಸ್ತಪ್ರತಿಯಾಗಿ ಸಿಕ್ಕಿದ್ದರೂ ಇದನ್ನು ನಿರ್ದುಷ್ಟವಾಗಿ ಸಂಪಾದಿಸಿದರು. ೧೯೮೪ರಲ್ಲಿ ಇದು ಮಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಾಶಿತವಾಯಿತು. ಅವರ ಹಳೆಯ ಗ್ರಂಥಗಳ ಅನ್ವೇಷಣೆ ಮತ್ತೆಯೂ ಮುಂದುವರಿಯುತ್ತಿದ್ದಂತೆ ಬೆಳಕಿಗೆ ಬಂದ ಪ್ರಾಚೀನ ಕೃತಿಗಳು 'ದೇವೀಮಹಾತ್ಮೆ' ಮತ್ತು 'ಕಾವೇರಿ' ಎಂಬ ಎರಡು ಮಹಾಕಾವ್ಯಗಳು. 'ದೇವೀ ಮಹಾತ್ಮೆ' ಒಂದು ಗದ್ಯಕೃತಿ. ಹಳತುಳುವಿನಲ್ಲಿ ರಚಿತವಾಗಿದೆ. ಇವೆರಡೂ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಿಂದ ಪ್ರಕಟವಾದವು. ಅನಂತರ ಅವರಿಗೆ ಸಿಕ್ಕಿದ ಅಮೂಲ್ಯ ಕೃತಿಯೇ ಇದೀಗ ಪ್ರಕಟವಾಗುತ್ತಿರುವ ತುಳು 'ಮಹಾಭಾರತೊ'. ಮಹಾಭಾರತದ ಕಥೆಯನ್ನು ತುಳುವಿನಲ್ಲಿ ನಿರೂಪಿಸುವ ಈ ಕಾವ್ಯದ ಕರ್ತೃ 'ಅರುಣಾಬ್ಜ' ಎಂಬುದಾಗಿ ಕಾವ್ಯದ ಮೊದಲಿಗೆ ಸೂಚಿತವಾಗಿದೆ.

ಶ್ರೀ ಪುಣಿಂಚತ್ತಾಯರು ಪ್ರತಿಷ್ಠಿತ ತುಳು ನಿಘಂಟುವಿನ ಸಂಪಾದಕ ಸಲಹಾ ಮಂಡಳಿಯ ಸದಸ್ಯರಾಗಿದ್ದರಲ್ಲದೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿಯೂ ಒಂದು ಅವಧಿಗೆ ನಿಯೋಜಿತರಾಗಿದ್ದರು. ಅನೇಕ ಸಂಘಸಂಸ್ಥೆಗಳ ವಿವಿಧ ಘಟಕಗಳಿಗೆ ಇವರು ಸದಸ್ಯರಾಗಿ ಸಾರ್ವಜನಿಕವಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಉತ್ತಮ ಅಧ್ಯಾಪಕರಾಗಿ ರಾಷ್ಟ್ರಪ್ರಶಸ್ತಿ ಗಳಿಸಿದ್ದ ಶ್ರೀ ಪುಣಿಂಚತ್ತಾಯರಿಗೆ ಇತರ ಅನೇಕ ಪ್ರಶಸ್ತಿ ಗೌರವಗಳು ದೊರೆತಿವೆ. ಕಳೆದ ವರ್ಷ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಗೌರವ ಪ್ರಶಸ್ತಿಯನ್ನಿತ್ತು ಪುರಸ್ಕರಿಸಿದೆ.

ಹೀಗೆ ಕವಿತ್ವ, ಸಂಶೋಧಕತ್ವ ಎರಡರಲ್ಲೂ ಲೀಲಾಜಾಲವಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಪುಣಿಂಚತ್ತಾಯರು ತುಳುವಿಗೆ ಶಿಷ್ಟಸಾಹಿತ್ಯಪರಂಪರೆ ಮತ್ತು ತುಳುಲಿಪಿ ಇವೆರಡೂ ಇವೆಯೆಂಬುದನ್ನು ಏಕಕಾಲದಲ್ಲಿ ಸ್ಥಾಪಿಸಿದ ಶ್ರೇಷ್ಠ ವಿದ್ವಾಂಸರು. ತುಳು ಗ್ರಂಥಸಂಪಾದನಕ್ಷೇತ್ರದಲ್ಲಿ ಇದು ವರೆಗೆ ಯಾರೊಬ್ಬರೂ ಅವರ ಸ್ಥಾನಕ್ಕೆ ಬಾರದಿರುವುದು ಅವರನ್ನು ಈ ಕ್ಷೇತ್ರದಲ್ಲಿ ಅಕ್ಷರಶಃ ಅದ್ವಿತೀಯರನ್ನಾಗಿಸಿದೆ. ಅವರಿಂದ ತುಳು ಸಂಶೋಧನಕ್ಷೇತ್ರಕ್ಕೆ ಇನ್ನಷ್ಟು ಹೆಚ್ಚಿನ ಸೇವೆ ಸಲ್ಲುವಂತಾಗಲಿ ಎಂಬುದು ತುಳುವರೆಲ್ಲರ ಹಾರೈಕೆ.

ಡಾ। ಕೆ. ಪದ್ಮನಾಭ ಕೇಕುಣ್ಣಾಯ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ,
ಉಡುಪಿ.

ಪ್ರಸ್ತಾವನೆ

ಅರುಣಾಬ್ಜ ಕವಿಯ ತುಳು ಮಹಾಭಾರತವು ತುಳು ಸಾಹಿತ್ಯದ ಒಂದು ಅಮೂಲ್ಯ ಕೃತಿ. ಈಗ ದೊರೆತಿರುವ ತುಳು ಕಾವ್ಯಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದುದು. ಹಾಗೆಂದು ಅರುಣಾಬ್ಜನೇ ತುಳುವಿನ ಆದಿಕವಿಯಲ್ಲ; ಮಹಾಭಾರತವೇ ತುಳುವಿನ ಆದಿಕಾವ್ಯವೂ ಅಲ್ಲ. ಮಹಾಭಾರತಕ್ಕಿಂತಲೂ ಮೊದಲು ತುಳುವಿನಲ್ಲಿ ರಾಮಾಯಣಕಾವ್ಯ ರಚನೆಯಾಗಿತ್ತು ಎಂದು ಆತನೇ ಸೂಚಿಸುತ್ತಾನೆ.

ತೆಳಿವುಳ್ಳಾಕುಳು ಭೂಮಿ-
ತುಳ್ಯೆ ರಾಮಾಯಣ ಕಾವ್ಯೊ
ತುಳುಭಾಷೆ ಕವಿಕುಳು ವಿಸ್ತರಿತೆರ್ಯೆಯೇರ್
ಅಳಿಯೇನಾಕುಳೆ ಪಾದ-
ನಳಿನೊಂತಾ ಮಧುವುಣ್ಕೆ
ಯಿಳೆಟ್ ಭಾರತಕಾವ್ಯೊ ರಚಿಯೀಪುಪ್ಪೆ *(ಸಂಧಿ-೧; ಪಾಡ್-೯)*

'ತುಳುಭಾಷೆ ಕವಿಕುಳು' ಎಂದು ಬಹುವಚನವನ್ನು ಹೇಳಿರುವುದರಿಂದ ಕನಿಷ್ಠ ಪಕ್ಷ ಇಬ್ಬರಾದರೂ ತುಳುವಿನಲ್ಲಿ ರಾಮಾಯಣವನ್ನು ರಚಿಸಿರಬೇಕು –ಎಂಬ ಊಹೆಗೆ ಅವಕಾಶವಿದೆ. ಅಂತಹ ಅಜ್ಞಾತಕವಿಗಳ 'ಪಾದಕಮಲಗಳ ತುಂಬಿ ನಾನು' ಎಂಬ ಮಾತಿನಲ್ಲಿ ಆತನಿಗೆ ಪೂರ್ವಕವಿಗಳ ಬಗ್ಗೆ ಇರುವ ಗೌರವಭಾವವು ವ್ಯಕ್ತವಾಗುತ್ತದೆ.

ಅರುಣಾಬ್ಜನಿಗಿಂತ ಸುಮಾರು ಎರಡು ತಲೆಮಾರುಗಳ ಮೊದಲೇ ತುಳುವಿನಲ್ಲಿ ಕಾವ್ಯಪ್ರಕ್ರಿಯೆ ಆರಂಭವಾಗಿತ್ತು ಎನ್ನಬಹುದು. ಯಾಕೆಂದರೆ ಅವನ ಗುರುವಿನ ಗುರು ಒಬ್ಬ ಜಾಣಕವಿ ಎಂದು ಅವನೇ ಪ್ರಸ್ತಾವಿಸಿದ್ದಾನೆ.

ಏಣಾಪಾಣಿಮುಕುಂದ
ನಾಣಿಲ್ತಾಯೆ ಭಜೀತೆ
ಕ್ಷೋಣಿಟುತ್ತಮೆಯಾಸ್ಪೀ ದ್ವಿಜ ಕುಲಾಢ್ಯೆ
ಜಾಣೇ ನಿರ್ಮಿತೆ ಕಾವ್ಯೊ
ಮಾಣಾನೇ ವಿಕಸೀತ್
ಮಾಣೇ ಯೇನಾಯನ್ ಶಿಷ್ಯೆರೆಕ್ ಶಿಷ್ಯೆ *(ಸಂಧಿ-೧; ಪಾಡ್-೮)*

ನಾಣಿಲ್ತಾಯ ಕುಲದ ಏಣಾಪಾಣಿಮುಕುಂದ (ಶಂಕರನಾರಾಯಣ?) ಎಂಬ ಪ್ರಸಿದ್ಧ ಕವಿಯ ಶಿಷ್ಯನ ಶಿಷ್ಯ ನಾನು –ಎನ್ನುತ್ತಾನೆ ಅರುಣಾಬ್ಜ. ಅರುಣಾಬ್ಜ ಕವಿಯ

ಮೂಲಕ ನಮಗೆ ದೊರೆಯುವ ಇತರ ಕಾವ್ಯಗಳ ವಿಚಾರವನ್ನು ಈಗ ಪರಿಶೀಲಿಸೋಣ.

ಹರಿ ಶ್ರೀರುಕ್ಮಿಣಿದೇವೀ
ವರಿಯೀತಿನ್ ಕಥೆ, ಭೀಮೆ
ಕೆರ್‌ಯೇ ಕೀಚಕನೆನ್ಕೀ ಚರಿತೇ, ಬಾಣನ್
ಕರೊ ಸಾರಾ ಮುರವೈರೀ
ತರಿತೀ ಕಥೆಯಾ ವಿ-
ಸ್ತರಿತ್ ಗುಡ್ಡೆತ ರಾಯೆ ನಿರ್ಮಿತೆ ಲೋಕೊಂಟ್ ॥

(ಸಂಧಿ-೧; ಪಾಡ್-೧೦)

ರುಕ್ಮಿಣೀ ಸ್ವಯಂವರ, ಕೀಚಕವಧೆ, ಬಾಣಾಸುರವಧೆ –ಎಂಬೀ ಮೂರು ಕೃತಿಗಳನ್ನು ಗುಡ್ಡೆತ ರಾಯೆ ಎಂಬ ಕವಿ ರಚಿಸಿರುವನು ಎಂಬ ವಿಚಾರವು ಮೇಲಿನ ಪದ್ಯದಿಂದ ತಿಳಿದುಬರುತ್ತದೆ.

ಲೋಕೊಂಟುತ್ತಮು ಮುತ್ತ್‌ಟ್
ಏಕಾದಶ್ಯುಪವಾಸಂ-
ತಾ ಕಾವ್ಯೋ ರೆಚಿಯೀತೀ ಮಹಿಮೆ ಕೊಂಡ್
ಶ್ರೀಕೃಷ್ಣೇ ತುಣೆಯಾಯನ್
ಆಕರ್ಷಿತೆರ್ ಸಾಕ್ಷಾತ್
ಆ ಕವಿಕುಲನಾಥಾಕಭಿವಂದೀಪ್ಪೆ ॥ *(ಸಂಧಿ-೧; ಪಾಡ್-೧೧)*

'ಏಕಾದಶ್ಯುಪವಾಸಂತಾ ಕಾವ್ಯೊ' (ಅಂಬರೀಷೋಪಾಖ್ಯಾನವೆಂಬ ಕಾವ್ಯವನ್ನು) ರಚಿಸಿ, ಶ್ರೀಕೃಷ್ಣನ ಒಲುಮೆಗೆ ಪಾತ್ರನಾಗಿ, ಸಾಕ್ಷಾತ್ ಮುಕ್ತಿಯನ್ನು ಪಡೆದ ಒಬ್ಬ ಹಿರಿಯ ಕವಿಯನ್ನೂ ಆತ ಸ್ಮರಿಸುತ್ತಾನೆ.

ಅರುಣಾಬ್ಜ ಕವಿಯ ಮೂಲಕ ನಮಗೆ ದೊರೆಯುವ ಕವಿಗಳ ಮತ್ತು ಕಾವ್ಯಗಳ ಹೆಸರನ್ನು ಹೀಗೆ ಪಟ್ಟಿಮಾಡಬಹುದು.

ಕವಿಗಳು: ಶಂಕರನಾರಾಯಣ (?)
ಗುಡ್ಡೆತ ರಾಯೆ

ಕಾವ್ಯಗಳು: ರಾಮಾಯಣ
ರುಕ್ಮಿಣೀ ಸ್ವಯಂವರ
ಬಾಣಾಸುರವಧೆ
ಕೀಚಕವಧೆ
ಅಂಬರೀಷೋಪಾಖ್ಯಾನ

ಅರುಣಾಬ್ಜನ ಗುರುವಿನ ಗುರುವಾದ ಶಂಕರನಾರಾಯಣ(?)ನು ಸರಸವಾದ ಬಿಡಿ ಕವಿತೆಗಳನ್ನು ಬರೆಯುತ್ತಿದ್ದ ಒಬ್ಬ ಆಶುಕವಿಯಾಗಿರಬೇಕು. ಮಹಾಕಾವ್ಯವನ್ನೋ, ಖಂಡಕಾವ್ಯವನ್ನೋ ಬರೆಯುತ್ತಿದ್ದರೆ ಅರುಣಾಬ್ಜನು ಅದನ್ನು ಪ್ರಸ್ತಾವಿಸುತ್ತಿದ್ದನು.

ಅರುಣಾಬ್ಜನು ಹೆಸರಿಸಿದ ಮೇಲಿನ ಐದು ಕಾವ್ಯಗಳು, ಈಗ ಪ್ರಕಟವಾಗುತ್ತಿರುವ ಈ ಮಹಾಭಾರತ ಮತ್ತು ಈಗಾಗಲೇ ಲಭ್ಯವಾಗಿರುವ ಶ್ರೀಭಾಗವತೊ, ಕಾವೇರಿ, ದೇವೀಮಹಾತ್ಮೆ –ಇವೆಲ್ಲ ಸೇರಿ ತುಳುವಿನಲ್ಲಿ ಒಟ್ಟು ಒಂಬತ್ತು ಕೃತಿಗಳು ರಚಿತವಾಗಿವೆ ಎನ್ನಬಹುದು. ಇವಲ್ಲದೆ ಹತ್ತನೆಯದು ಎನ್ನಬಹುದಾದ ಇನ್ನೊಂದು ಕಾವ್ಯದ ಬಗ್ಗೆಯೂ ನಮಗೆ ಸುಳಿವು ದೊರೆಯುತ್ತದೆ. ಆ ಸುಳಿವು ನೀಡಿದವರು ವಿದೇಶೀ ವಿದ್ವಾಂಸರಾದ ರೆವ. ಜೆ. ಬ್ರಿಗೆಲ್ ಎಂಬವರು. "A Grammar of the Tulu language" ಎಂಬ ಗ್ರಂಥದಲ್ಲಿ [ಪುಟ ೧೩೩] "Tulu Poetry" (According to metrical rules) ಎಂಬ ಶೀರ್ಷಿಕೆಯ ಕೆಳಗೆ ಯಾವುದೋ ಒಂದು ಅಜ್ಞಾತಕಾವ್ಯದ ನಾಲ್ಕು ಪದ್ಯಗಳನ್ನು ಅವರು ಉದಾಹರಿಸಿದ್ದಾರೆ.

ಅಂದ ದೇವೆರೆ ಈರೆಗೆನಟೀತ್ ಕೋಪೊ ಜಾಯೆಕ್ ಯೆಂದಳ್
ಇಂದಿರಾಧವ ನಿತ್ಯ ಸ್ನೇಹಿತೆಯೆಂದ್ ಸ್ತುತಿತಳ್ ಆರೆನಿ
ಚಂದ್ರಕಲೆಕುಳೆ ಧರಿತಿ ಈರೆ ಮುಖಾಂಬುಜೊಂತಾ ಯೆದ್ರ್‌ಟ್
ಚಂದೊಂಟಿನಣೇರ್ ಚೂತು ಅಂಗೀಕಾರೊ ಮಂತೊಣೊಡೆಂದಳ್ ॥ ೫೧ ॥

ಮದನಾರಿ ಚೂತು ತನ ಕಾಂತೆಡೊಪ್ಪ ಕುಳ್ಳಿಯೆರ್
ತದನಂತರೊಂಟು ನಂದೀಶ್ವರೆಲ ಬತ್ತ್‌ತ್ ಈಶ್ವರಗ್
ಪದೊಂಕುಳೆಗ್ ಅಭಿವಂದಿತ್ ಪುಡವಾಡ್‌ತ್ ಪ್ರಮಥೆರೆಗ್
ಆಧಿಪತಿಯೆಂದ್ ಪಣ್ಪೊತಿನಾಯೆ ಬತ್ತೆದ್‌ರೆಂತ್‌ನಗ ॥ ೫೨ ॥

ನಾರದಮುನೀಂದ್ರ ವಚನೊಂಕುಳೆನಿ ಕೇಂಡ್‌ತ್
ಸಾರಹೃದಯೊಂಟು ರತಿ ದುಃಖೊ ಬುಡುನಗಲಾ
ನಾರಾಯಣ ಶ್ರೀಚರಣೊ ಭಕ್ತಿ ದೃಢೀತೊಂಡು
ಸ್ವೈರೊ ಸುಖಿತ್‌ತ್ತೆರ್ ನಾಣ ನಿತ್ಯೊ ವಿಭವೊಂಟು ॥ ೫೩ ॥

ಪಾಪಿ ತಪೊ ಚೆಟ್ಪೊತ್ತೆಯೆಂದ್ ಮನಸ್‌ಟ್ ಯೆಂಣ್‌ತ್
ಶ್ರೀಪತಿಗ್ ಭಕ್ತಿಡ್ ಸಮರ್ಪಣೊನಿ ಮಂತ್ ಶಂಭು
ಸ್ಥಾಪಿತ್‌ಣವೂತ್ತೆಳ್‌ತ್ ಚೋಜನಪ್ರಕಾರ
ರೂಪೊ ಮದೆ ಮಾಂತ್ ಶಿವೆ ಯಾತ್ರಿತೆರ್ ಅಳ್ತ್ ॥ ೫೪ ॥

ಈ ಪದ್ಯಗಳಲ್ಲಿ ದ್ವಿತೀಯಾಕ್ಷರ ಪ್ರಾಸವಿದೆ. ಆದರೆ ಛಂದಸ್ಸು ಅಲ್ಲಲ್ಲಿ ಬೀಳುತ್ತದೆ. ತುಳು ಪ್ರಾಚೀನ ಕಾವ್ಯಗಳಲ್ಲಿ ಕಂಡುಬರುವ 'ಸ್ಟ್'ಕಾರವು ಇಲ್ಲಿ

ತಕಾರವಾಗಿದೆ. ಉದಾ: ಚೂಸ್ಟ್>ಚೂತು; ಚೆಟ್ಟೋಸ್ಟೆ>ಚೆಟ್ಟೋತ್ತೆ -ಇತ್ಯಾದಿ. ಗಿರಿಜಾಕಲ್ಯಾಣ ಕಥೆಯ ಒಂದು ಛಾಯೆ ಇಲ್ಲಿ ಕಾಣುತ್ತದೆ. ಇಲ್ಲಿ ಉದಾಹರಣೆ ಕೊಟ್ಟದ್ದು ಆ ಕಾವ್ಯದ ಕೊನೆಯ ಪದ್ಯಗಳೆಂದೇ ಊಹಿಸಿದರೂ, ಕಾವ್ಯದಲ್ಲಿ ಒಟ್ಟು ಐವತ್ತನಾಲ್ಕು ಪದ್ಯಗಳಿವೆಯೆಂಬ ಸತ್ಯವನ್ನು ಅಲ್ಲಗಳೆಯುವಂತಿಲ್ಲ.

ಅಂತೂ ತುಳುವಿಗೊಂದು ಪ್ರಾಚೀನ ಕಾವ್ಯಪರಂಪರೆಯಿತ್ತು ಎಂಬುದನ್ನು ಮೇಲಿನ ವಿಚಾರಗಳು ಸ್ಪಷ್ಟಪಡಿಸುತ್ತವೆ.

ಕಾವ್ಯದ ವಸ್ತು:

ಅರುಣಾಬ್ಜ ಕವಿಯ ಕಾವ್ಯದ ವಸ್ತು ಮಹಾಭಾರತದ ಸಂಭವಪರ್ವ.

"......ಭಾರತೊಂಟ್ತ್ತೊಂಪೆ
ತೆರಿತ್ ಸಂಭವಪರ್ವೊ-
ಮರುಣಾಬ್ಜೆ ವಿರಚೀತೆ
ಧರಣೀಟುತ್ತಮೆರ್ ಮಾನಿಪುಕ್ಣಂದೊ *(ಸಂಧಿ-೧; ಪಾಡ್-೧೩)*

ಹದಿನೆಂಟು ಪರ್ವಗಳುಳ್ಳ ಶ್ರೀಮನ್ಮಹಾಭಾರತದಲ್ಲಿ ಆದಿಪರ್ವದ ಒಂದು ಉಪಪರ್ವಕ್ಕೆ ಸಂಭವಪರ್ವ ಎಂಬ ಹೆಸರು ಕೊಡಲಾಗಿದೆ.

ಪಾಂಡವ ಕೌರವಾದಿ ಪ್ರಮುಖರ ಸಂಭವ(ಉತ್ಪತ್ತಿ)ವಿಚಾರ ಈ ಪರ್ವದಲ್ಲಿ ಬರುತ್ತದೆ. ಹಾಗೆಂದು ಅರುಣಾಬ್ಜನು ಸಂಭವಪರ್ವದ ವಿಷಯ ಮಾತ್ರ ಬರೆದುದಲ್ಲ; ಸಂಭವಪರ್ವದಿಂದ ಆರಂಭಿಸಿ 'ಖಾಂಡವದಾಹಪರ್ವ'ದ ವರೆಗಿನ ಹನ್ನೆರಡು ಉಪಪರ್ವಗಳ ಕಥೆಯನ್ನೂ ಆತ ಈ ಕಾವ್ಯದಲ್ಲಿ ಸಂಕಲಿಸಿದ್ದಾನೆ. ಅರುಣಾಬ್ಜನು ಆಯ್ದುಕೊಂಡ ಉಪಪರ್ವಗಳು:

೧. ಸಂಭವಪರ್ವ
೨. ಜತುಗೃಹಪರ್ವ
೩. ಹಿಡಿಂಬವಧಪರ್ವ
೪. ಬಕವಧಪರ್ವ
೫. ಚೈತ್ರರಥಪರ್ವ
೬. ಸ್ವಯಂವರಪರ್ವ
೭. ವೈವಾಹಿಕಪರ್ವ
೮. ವಿದುರಾಗಮನ ರಾಜ್ಯಲಾಭಪರ್ವ
೯. ಅರ್ಜುನವನವಾಸಪರ್ವ
೧೦. ಸುಭದ್ರಾಹರಣಪರ್ವ
೧೧. ಹರಣಾಹರಣಪರ್ವ
೧೨. ಖಾಂಡವದಾಹಪರ್ವ

ಸಂಸ್ಕೃತ ಮಹಾಭಾರತದ ಪ್ರಕಾರ ಒಟ್ಟು ೧೮೮ ಅಧ್ಯಾಯಗಳ ಕಥೆ ಇಲ್ಲಿ ಸಂಕಲನಗೊಂಡಿದೆ. ಕುಮಾರವ್ಯಾಸನು ಅಧ್ಯಾಯಗಳನ್ನು ಸಂಧಿ ಎಂಬ ಹೆಸರಿನಿಂದ ಕರೆದಿದ್ದಾನೆ. ಆದರೆ ಸಂಸ್ಕೃತದ ಅಧ್ಯಾಯದ ವಿಭಜನೆಗಳಿಗೂ ಕುಮಾರವ್ಯಾಸನ ಸಂಧಿಯ ವಿಭಜನೆಗಳಿಗೂ ಯಾವುದೇ ಹೋಲಿಕೆಯಿಲ್ಲ.

ಅರುಣಾಬ್ಜನ ಮಹಾಭಾರತ ಮತ್ತು ಕುಮಾರವ್ಯಾಸನ ಮಹಾಭಾರತ –ಕೃತಿಗಳ ನಡುವಣ ಮುಖ್ಯ ವ್ಯತ್ಯಾಸಗಳು:[1]

ಕುಮಾರವ್ಯಾಸನ ಮಹಾಭಾರತ	ಅರುಣಾಬ್ಜನ ಮಹಾಭಾರತ
೧. ಭಾಮಿನಿ ಷಟ್ಪದಿಯಲ್ಲಿದೆ.	ಅಂಶಗಣಷಟ್ಪದಿ ಹಾಗೂ ಮಲ್ಲಿಕಾಮಾಲಾ ವೃತ್ತ, ತೋಟಕವೃತ್ತ, ಮತ್ತು ತೋಟಕಜನ್ಯ ವೃತ್ತ (ದೀರ್ಘ) ಮುಂತಾದ ವೃತ್ತಗಳನ್ನೊಳಗೊಂಡಿದೆ. ವೃತ್ತಗಳ ಧಾಟಿಗೆ ಹೊಂದಿಸಿಕೊಂಡು ಅನೇಕ ಸಂದರ್ಭಗಳಲ್ಲಿ ಅಕ್ಷರಗಣವನ್ನು ಮಾತ್ರಾಗಣವನ್ನಾಗಿ ಪರಿವರ್ತಿಸಿಕೊಂಡ ಉದಾಹರಣೆಗಳೂ ಇವೆ. ಅರುಣಾಬ್ಜನು ಸಂಸ್ಕೃತ ಛಂದೋನಿಯಮಗಳ ದಾಸನಲ್ಲ; ಅವನಿಗೆ ವೃತ್ತಗಳ ನಡೆ ಮತ್ತು ಲಯಗಳು ಮುಖ್ಯವೇ ಹೊರತು ಮೂಲ ನಿಯಮಗಳು ಮುಖ್ಯವಲ್ಲ.
೨. ಆದಿಪರ್ವದಲ್ಲಿ ತಾನು ಆಯ್ದುಕೊಂಡ ಉಪಪರ್ವಗಳನ್ನೆಲ್ಲ ಒಟ್ಟಾಗಿ ಸಂಧಿಗಳನ್ನಾಗಿ ವಿಭಜಿಸಿಕೊಂಡಿದ್ದಾನೆ. ಉಪಪರ್ವಗಳ ಹೆಸರನ್ನು ಪ್ರಸ್ತಾವಿಸುವುದೇ ಇಲ್ಲ. ಸಂಭವಪರ್ವವೆಂಬ ಉಪಪರ್ವದಿಂದ ಆತ ಕಾವ್ಯವನ್ನು ಆರಂಭಿಸಿದ್ದಾನೆ.	ಮಹಾಭಾರತದ ಸಂಭವಪರ್ವದ ಕಥೆಯನ್ನು ಕಾವ್ಯವಾಗಿ ವಿರಚಿಸುತ್ತೇನೆಂದು ಹೇಳಿ, ಸಂಭವಪರ್ವದ ಅನಂತರ ಆದಿಪರ್ವದಲ್ಲಿ ಬರುವ ಇತರ ಎಲ್ಲ ಉಪಪರ್ವಗಳನ್ನೂ ಕುಮಾರವ್ಯಾಸನ ಹಾಗೆಯೇ ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡಿದ್ದಾನೆ. ಸಂಧಿವಿಭಜನೆಯಲ್ಲಿ ಕುಮಾರವ್ಯಾಸನ ಧೋರಣೆಯನ್ನೂ ಅನುಸರಿಸದೆ ತನ್ನದೇ ಆದ ಒಂದು ವಿಧಾನದಲ್ಲಿ ಸಂಧಿಗಳನ್ನು ವಿಭಜಿಸಿಕೊಂಡಿದ್ದಾನೆ. ಕುಮಾರವ್ಯಾಸನ ೨೦ ಸಂಧಿಗಳು ಇಲ್ಲಿ ೨೪ ಸಂಧಿಗಳಾಗಿವೆ.
೩. ಅರ್ಧಭಾಮಿನಿಯಲ್ಲಿ ಆಯಾ ಸಂಧಿಯ ಸಾರಾಂಶ (ಸಂಧಿಸೂಚನೆಯನ್ನು) ಹೇಳಿದ್ದಾನೆ.	ಸಂಧಿಸೂಚನೆಯ ಪದ್ಯಗಳಿಲ್ಲ.
೪. ಪ್ರಾರಂಭದಲ್ಲಿ ತನ್ನ ಇಷ್ಟದೇವತೆಯಾದ ಗದುಗಿನ ವೀರನಾರಾಯಣನನ್ನು ಸ್ತುತಿಸಿದ್ದಾನೆ. ಬಳಿಕ ಶಿವ ಗಣಪತಿ ಶಾರದೆಯರನ್ನು ಸ್ತುತಿಸಿದ್ದಾನೆ.	ಪ್ರಾರಂಭದಲ್ಲಿ ಗಣಪತಿಯನ್ನು ಸ್ತುತಿಸಿ, ಬಳಿಕ ಶಿವ ಪಾರ್ವತಿ ಸರಸ್ವತೀದೇವಿಯರನ್ನೂ, ಕೊಡವೂರಿನ ಮೃಡರಾಮದೇವರನ್ನೂ ಸ್ತುತಿಸಿದ್ದಾನೆ.

1. ಕುಮಾರವ್ಯಾಸನು ಮಹಾಭಾರತದ ಕಥೆಯನ್ನು ಎಲ್ಲಿಂದ ಪ್ರಾರಂಭಮಾಡಿದ್ದಾನೋ ಅಲ್ಲಿಂದಲೇ ಅರುಣಾಬ್ಜನೂ ಕಥಾರಂಭ ಮಾಡಿದ್ದಾನೆ. ಆದರೆ ಕಥೆಯ ಮುನ್ನಡೆಯಲ್ಲಿ ಮಾತ್ರ ಬಹಳಷ್ಟು ವ್ಯತ್ಯಾಸಗಳಿರುವುದನ್ನು ಕಾಣಬಹುದು.

ಕವಿಚರಿತ್ರೆ

ಅರುಣಾಬ್ಜ ಎಂಬುದು ತುಳುನಾಡಿನಲ್ಲಿ ಪ್ರಚಲಿತವಾಗಿರುವ ಒಂದು ಹೆಸರಲ್ಲದ ಕಾರಣ, ಅದು ಕವಿಯ ಕಾವ್ಯನಾಮವಿರಬೇಕು. ಕವಿಯು ಕುಡವೂರಿನ ಮೃಡರಾಮ ದೇವರ ಭಕ್ತ. ತನ್ನ ಕಾವ್ಯಕ್ರಿಯೆ ನಿರ್ವಿಘ್ನವಾಗಿ ಮುಂದುವರಿಯುವಂತೆ ತನ್ನ ಇಷ್ಟದೈವವನ್ನು ಹೀಗೆ ಪ್ರಾರ್ಥಿಸಿಕೊಂಡಿದ್ದಾನೆ:

ಕುಡವೂರ್‌ಟುದಿಯಿೀತೀ
ಮೃಡರಾಮ ಚರಣಾಬ್ಜಂ-
ತಡಿಟುಳ್ಳಾ ಪೊಡಿ ನಿಂಜೊ ಮುಡಿತೊಂಡ್
ಉಡರೀಪುಪ್ಪೆನ್ ಕಾವ್ಯೊ-
ಮುಡೆಟೆಂಕೊಂಜುಡವು ವ-
ರ್ತಡೆಪಂತೀ ಪರಿಶೇ ರಕ್ಷಿಪಿಲೆ ಸ್ವಾಮಿ *(ಸಂಧಿ-೧; ಪಾಡ್-೩)*

ಈಗಿನ ಕೊಡವೂರು ಹಿಂದೆ ಕುಡವೂರಾಗಿತ್ತು. 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ದಲ್ಲಿ ಈ ಸ್ಥಳವನ್ನು ಕುಡಾರ (ಮಲಪೆ) ಎಂದು ಉಲ್ಲೇಖಿಸಿದೆ. ನಿಡಂಬೂರು ಬಲ್ಲಾಳರ ಆಡಳಿತೆಗೊಳಪಟ್ಟ ಹನ್ನೊಂದು ಗ್ರಾಮಗಳಿಗೆ ಕುಡಾರ (ಮಲಪೆ) ಶಂಕರನಾರಾಯಣ ದೇವಸ್ಥಾನವೂ, ಬಿಲ್ಲುಗುಡ್ಡೆ ನಂದನೇಶ್ವರ ದೇವ ಸ್ಥಾನವೂ, ಸೀಮೆದೇವಸ್ಥಾನಗಳಾಗಿದ್ದುವೆಂದು ತಿಳಿಯಲಾಗಿದೆ. ಕವಿಯು ಕುಡವೂರು ಪರಿಸರದವನಿರಬೇಕು –ಎಂಬುದಕ್ಕೆ ಬೇರೆಯೂ ಪುರಾವೆಗಳಿವೆ.

"....ಮೂಡಿಲ್ಲಾರ್
ವನಜಾರೀ ಸಮೆ ಶಿವಾ ನೆಡ್‌ಂಬುರಾರ್ ।
ಅನುಪಮೆರಿರುವೇರೆ-
ನ್ನನುಮಾತೀಟ್ಜೆನ ಕಾವ್ಯೊ
ವನರುಹೊ ವಿಕಸೀಪೊಡುನ ಲೋಕೊಂಟ್ *(ಸಂಧಿ-೧; ಪಾಡ್-೧೬)*

ಚಿಟ್ಟುಪಾಡಿ ಬೀಡಿನ ಮೂಡಿಲ್ಲಾರ್ ಮತ್ತು ನಿಡಂಬೂರು ಬೀಡಿನ ನಿಡ್‌ಂಬುರಾರ್ ಎಂಬ ಇಬ್ಬರು ಅರಸರ ಅನುಗ್ರಹದಿಂದ ತನ್ನ ಕಾವ್ಯವೆಂಬ ಕಮಲವು ವಿಕಸಿತವಾಗಲಿ ಎಂದು ಕವಿ ಹಾರೈಸಿದ್ದಾನೆ. ರಾಜಾಶ್ರಯದ ಮೂಲಕ ತನ್ನ ಕಾವ್ಯವು ಹೆಚ್ಚು ಪ್ರಸಿದ್ಧಿಯನ್ನು ಪಡೆಯಲಿ ಎಂಬ ಆಕಾಂಕ್ಷೆ ಕವಿಗಿದ್ದಂತೆ ಕಾಣುತ್ತದೆ.

ಕವಿಯು 'ಶಿವಾ ನೆಡ್‌ಂಬುರಾರ್'ರ ಸಮಕಾಲೀನನೆಂಬುದು, ಕವಿಯ ಕಾಲ ನಿರ್ಣಯಕ್ಕೆ ದೊರಕಿದ ಉತ್ತಮ ಪುರಾವೆಯಾಗಿದೆ. ಶಿವಾ ನೆಡ್‌ಂಬುರಾರರಿಗೆ ಸಂಬಂಧಿಸಿದ (ಕ್ರಿ. ಶ. ೧೩೮೩) ಶಾಸನವೊಂದು, ಉಡುಪಿ ತಾಲೂಕಿನ ಬೆಣಗಲ್ಲು ಸಮೀಪದ ಸಾಸ್ತಾವು ಎಂಬಲ್ಲಿಯ ಸಾಸ್ತಾವೇಶ್ವರ ದೇವಸ್ಥಾನದಲ್ಲಿದೆ. 'ಉಡುಪಿ

ತಾಲೂಕಿನ ಶಾಸನಗಳು' ಎಂಬ ಪುಸ್ತಕದಲ್ಲಿ ಡಾ। ಬಿ. ವಸಂತ ಶೆಟ್ಟಿಯವರು ಈ ಕುರಿತಾಗಿ ಕೊಟ್ಟಿರುವ ವಿವರಣೆ ಹೀಗಿದೆ:

"ವಿಜಯನಗರದ ದೊರೆ ಇಮ್ಮಡಿ ಹರಿಹರನ ಆಳ್ವಿಕೆಯ ಕಾಲದಲ್ಲಿ ಬಾರಕೂರು ರಾಜ್ಯವನ್ನು ಜಕ್ಕಣ್ಣ ಒಡೆಯನು ಆಳುತ್ತಿದ್ದಾಗ, ಶಿವ ನಿಡಂಬೂರನಿಗೆ ಪರಿಹಾರ ನೀಡಿದ್ದನ್ನು ದಾಖಲಿಸುವುದು ಈ ಶಾಸನದ ಉದ್ದೇಶ. ಸಾಸ್ತಾವು, ಪೆಜಮಂಗೂರು ಗ್ರಾಮದ ಭಾಗವಾಗಿತ್ತೆಂದು ತಿಳಿಸುವ ಈ ಶಾಸನ; ಈ ಗ್ರಾಮದ ಮತ್ತು ಯೆಳುದಂಪಳಿಯ ತೆರಿಗೆಯನ್ನು ಶಿವ ನಿಡಂಬೂರನಿಗೆ ಅವನ ತಂದೆ ಅಣ್ಣ ನಿಡಂಬೂರನು ರಾಜಕಾರ್ಯದಲ್ಲಿ ನಿರತನಾಗಿದ್ದಾಗ, ಮರಣ ಹೊಂದಿದ ಪ್ರಯುಕ್ತ ಪರಿಹಾರವಾಗಿ ನೀಡಲಾಯಿತೆಂದು ಹೇಳುತ್ತದೆ. ಅಧಿಕಾರಿಯೋರ್ವನು ಕಾರ್ಯ ನಿರತನಾಗಿದ್ದಾಗ ಮರಣಹೊಂದಿದರೆ ಅವನ ಕುಟುಂಬಕ್ಕೆ ಪರಿಹಾರ ನೀಡುವ ಕ್ರಮ ಈ ಶಾಸನದಿಂದ ತಿಳಿಯುತ್ತದೆ."೧

ಅಣ್ಣ ನಿಡಂಬೂರನು ನಿಧನಹೊಂದಿದ ಬಳಿಕ, (ಕ್ರಿ. ಶ. ೧೩೮೩ರ ಅನಂತರ) ಶಿವಾ ನಿಡಂಬೂರನು ತನ್ನ ತಂದೆಯ ಸ್ಥಾನದಲ್ಲಿ ನೇಮಕಗೊಂಡಿರಬೇಕು. ಇದೇ ಸಂದರ್ಭದಲ್ಲಿ ಅರುಣಾಬ್ಜನೂ ತನ್ನ ಕಾವ್ಯದ ಪ್ರಸಿದ್ಧಿಗಾಗಿ ರಾಜಾಶ್ರಯವನ್ನು ಪಡೆದಿರಬೇಕು. ಈ ಆಧಾರದ ಪ್ರಕಾರ ಅರುಣಾಬ್ಜನು ಸುಮಾರು ಹದಿನಾಲ್ಕನೆಯ ಶತಮಾನದ ಕೊನೆ ಅಥವಾ ಹದಿನೈದನೆಯ ಶತಮಾನದ ಆರಂಭದಲ್ಲಿ ಈ ಕಾವ್ಯವನ್ನು ರಚಿಸಿರಬೇಕೆಂದು ನಿರ್ಧರಿಸಬಹುದು.

ಅರುಣಾಬ್ಜನ ಕಾಲನಿರ್ಣಯದಿಂದ ಕವಿ ಕುಮಾರವ್ಯಾಸನ ಕಾಲನಿರ್ಣಯಕ್ಕೂ ಒಂದು ಸರಿಯಾದ ಆಧಾರ ದೊರೆತಂತಾಗುತ್ತದೆ. "ಕವಿಚರಿತೆಕಾರರು ಕುಮಾರವ್ಯಾಸನ ಕಾಲವನ್ನು ಹದಿಮೂರನೆಯ ಶತಮಾನದಿಂದ ಹದಿನೈದನೆಯ ಶತಮಾನದ ವರೆಗೂ ಎಳೆದಾಡುತ್ತಿದ್ದಾರೆ. ಈ ಕುರಿತು ವಿದ್ವಾಂಸರಲ್ಲಿ ಇದುವರೆಗೂ ಒಂದು ಏಕಾಭಿಪ್ರಾಯ ಮೂಡಿಬರಲಿಲ್ಲ" –ಎಂದು 'ಕರ್ಣಾಟ ಭಾರತ ಕಥಾಮಂಜರಿ'ಯ ಸಂಪಾದಕರಾದ ಶ್ರೀ ಕುವೆಂಪು ಮತ್ತು ಮಾಸ್ತಿಯವರು ಗ್ರಂಥಾರಂಭದ 'ತೋರಣನಾಂದಿ'ಯಲ್ಲಿ ಪ್ರಸ್ತಾವಿಸಿದ್ದಾರೆ. ಅದೇ ಸಂದರ್ಭದಲ್ಲಿ ದಿ। ಮಂಜೇಶ್ವರ ಗೋವಿಂದ ಪೈಗಳು ಹೇಳಿದ ಕುಮಾರವ್ಯಾಸನ ಕಾಲವನ್ನೂ (ಕ್ರಿ. ಶ. ೧೨೩೦–೩೫) ಅವರು ಸೂಚಿಸಿದ್ದಾರೆ.

ಅರುಣಾಬ್ಜನ ಮಹಾಭಾರತವು ಕುಮಾರವ್ಯಾಸನ 'ಭಾರತ ಕಥಾಮಂಜರಿ' ಯಿಂದ ಪ್ರಭಾವಿತವಾಗಿದೆ –ಎಂಬ ವಿಚಾರವನ್ನು ನಾವು ಅಲ್ಲಗಳೆಯುವಂತಿಲ್ಲ. ಅರುಣಾಬ್ಜನು ತನ್ನ ಕಾವ್ಯದ ವಿಷಯವರ್ಣನೆಗಳಲ್ಲಿ ಬಹುಪಾಲು ಸ್ವಂತಿಕೆಯನ್ನೇ ಪ್ರದರ್ಶಿಸಿದ್ದರೂ, ಕಾವ್ಯದ ವಸ್ತುವನ್ನು ಆಯ್ದುಕೊಳ್ಳುವಲ್ಲಿ ಮತ್ತು ಕಾವ್ಯಸ್ಫೂರ್ತಿಯನ್ನು ಪಡಕೊಳ್ಳುವಲ್ಲಿ, ಒಬ್ಬ ಮಾರ್ಗದರ್ಶಕ ಗುರುವೆಂಬಂತೆ ಕುಮಾರವ್ಯಾಸನನ್ನೇ

೧. ಶಾಸನದ ಪೂರ್ತಿ ಪಾಠವನ್ನು ಈ ಗ್ರಂಥದ ಅನುಬಂಧ ೨ರಲ್ಲಿ ಕೊಡಲಾಗಿದೆ.

ನೆಚ್ಚಿಕೊಂಡಿದ್ದಾನೆ ಎಂಬುದರಲ್ಲಿ ಸಂದೇಹವಿಲ್ಲ. ಈ ದೃಷ್ಟಿಯಿಂದ ಪುನರ್ವಿಮರ್ಶೆ ಮಾಡಿದಾಗ ದಿ। ಗೋವಿಂದ ಪೈಗಳು ಹೇಳಿದ ಕುಮಾರವ್ಯಾಸನ ಕಾಲವೇ ಸರಿಯಾದುದು ಎಂಬ ನಿರ್ಧಾರಕ್ಕೆ ನಾವು ಬರಬಹುದಾಗಿದೆ.

ತುಳು ಭಾಗವತವನ್ನು ಬರೆದ ವಿಷ್ಣುತುಂಗನಂತೆ ಈ ಕವಿಯೂ ಕಾವ್ಯಾರಂಭದಲ್ಲಿ ಒಂದು ಜಾತಕವನ್ನು ಪದ್ಯರೂಪದಲ್ಲಿ ರಚಿಸಿದ್ದಾನೆ:

ಗುರುಚಾಪೊಂಟುರಗೇಯಾ
ಹರಿಸೂನೂವಹಿತಸ್ಥೇ
ವರಶುಕ್ರೇ ತುಲೆಟ್, ಕೇತುವ ಮೇಷೊಂಟ್
ಹರಿಭೌವೆ.....ಶಶಾಂಕೇ-
[ರಿರುವೇರಾ?] ವೃಷಭೊಂಟ್-
ಪ್ಪರುಣಾಬ್ಜೇ ರಚಿಯೀತೇ ಕಥೆ ಭಾರತೊನ್ *(ಸಂಧಿ-೧; ಪಾಡ್-೧೨)*

ಈ ಜಾತಕದ ಆಧಾರದಲ್ಲಿ ಕವಿಯ ಕಾಲನಿರ್ಣಯವು ಸಾಧ್ಯವೇ –ಎಂದು ಖ್ಯಾತ ಜ್ಯೋತಿಷಿಗಳೂ, ಖಗೋಳ ಶಾಸ್ತ್ರಜ್ಞರೂ ಆದ ಶ್ರೀ ಕರಿಂಕ ವೆಂಕಟರಮಣ ಬನ್ನಿಂತಾಯರಲ್ಲಿ ವಿಚಾರಿಸಿದಾಗ ಅವರು ಮೇಲಿನ ಪದ್ಯದಲ್ಲಿ ಕೆಲವು ಆಕ್ಷೇಪಣೀಯವಾದ ಅಂಶಗಳು ಇವೆಯಾದ್ದರಿಂದ (ವಿವರಗಳಿಗೆ ನೋಡಿ: ಅನುಬಂಧ-೨) ಇದರ ಆಧಾರದಲ್ಲಿ ಕವಿಯ ನಿಖರವಾದ ಕಾಲನಿರ್ಣಯವು ಅಸಾಧ್ಯ ಎಂದು ತಿಳಿಸಿರುವರು.[೨] ಹಾಗಾಗಿ ಈ ಪ್ರಮಾಣವನ್ನು ಬದಿಗಿರಿಸಿ, ಪ್ರಕೃತ ನಮಗೆ ದೊರೆತಿರುವ

೨.

	ಕೇತು	ಚಂದ್ರ	
ರಾಹು		ಶುಕ್ರ ಶನಿ ರಾಹು	

ರವಿ?
ಕುಜ?
ಬುಧ?

"ಪದ್ಯದಲ್ಲಿರುವಂತೆ ಚಂದ್ರನೊಡನೆ ಇನ್ನೊಬ್ಬ ಗ್ರಹನಿರಬೇಕು; ರವಿಕುಜರು ಒಟ್ಟಿಗೆ ಇರಬೇಕು. ಅಥವಾ ಅವರಿಬ್ಬರಿಗೆ ಯಾವುದಾದರೊಂದು ವಿಧದ ಪರಸ್ಪರ ಸಂಬಂಧ ಇರಬೇಕು.

ಗ್ರಹಗಣಿತದ ವಿಧಿಯಂತೆ ರವಿಶುಕ್ರರ ಅಂತರ ಗರಿಷ್ಠ 45° (approximate) ಮತ್ತು ರವಿಬುಧರ ಅಂತರ ಗರಿಷ್ಠ 30° (approximate). ಆ ಪ್ರಕಾರ ಶುಕ್ರನು ತುಲಾರಾಶಿಯ ಆರಂಭದಲ್ಲಿದ್ದಾನೆಂದು ಗ್ರಹಿಸಿದರೆ ರವಿಯು ಸಿಂಹರಾಶಿಯ 15° ಅನಂತರ ವೃಶ್ಚಿಕ ರಾಶಿಯ ಮೊದಲ 15°ಯ ಒಳಗೆ ಇರಬೇಕು. ಶುಕ್ರನು ತುಲಾರಾಶಿಯ ಅಂತ್ಯದಲ್ಲಿ

ಶಾಸನದ ಪ್ರಕಾರ, ಕವಿಯ ಕಾಲವನ್ನು ಸುಮಾರು ಹದಿನಾಲ್ಕನೆಯ ಶತಮಾನದ ಕೊನೆ ಅಥವಾ ಹದಿನೈದನೆಯ ಶತಮಾನದ ಆರಂಭ ಎಂದು ನಿರ್ಧರಿಸುವುದೇ ಸೂಕ್ತ ವಾಗಿದೆ.

ಈ ಕಾಲನಿರ್ಣಯದ ಪ್ರಕಾರ ವಿಷ್ಣುತುಂಗನು ಅರುಣಾಬ್ಜನ ಅನಂತರದವ ನಾಗುತ್ತಾನೆ. ಆದರೆ ವಿಷ್ಣುತುಂಗನ ಕಾವ್ಯದಲ್ಲಿರುವ-

ಮಂದಭಾಗ್ಯೆರತೀ ಮನುಷ್ಯೆರ್ ಮಂದಬುದ್ಧೆರತೇನ್ಯೆಲಾ
ಮಂದಕರ್ಮ ಫಲಾಶ್ರಿತೆಕ್ಕುಳು ಮಂದಚೇತನಭಾವೆರ್
ಕುಂದ್‌ಸ್ಪೀನಲ್ಪಾಯುಷೇಕ್ಕುಳು ಶೌಚಸತ್ಯವಿಹೀನೆರ್
ಇಂದಿನೀ ಕಲಿಕಾಲಜಂತುಕ್ ಮುಕ್ತಿಯೆಂಚನುಕೂಲಿಪು

(ಶ್ರೀಭಾಗವತೊ - ೧-೧-೨೬)

ಎಂಬ ಪದ್ಯದ ಛಾಯೆಯನ್ನೊಳಗೊಂಡ ಒಂದು ಪದ್ಯವು ಮಹಾಭಾರತ ದಲ್ಲಿಯೂ ಇದೆ-

ಮಂದಭಾಗ್ಯೆರತೀ ಮನುಷ್ಯೆರ್ ಮಂದಬುದ್ಧಿವಿಹೀನೆರ್
ಮಂದವೃತ್ತಿಕುಳೂ ವೃಥಾಶ್ರಮಂಟಾವ ದೆಂಡಿಪೆರೇತಲಾ
ಬಂಧಿತ್‌ಪ್ಪೆರ್ ಮಾಯೆಟ್ ವಿಷಯಾರ್ಣವಂತುಳ್ಳೆ ಮುಂಗ್‌ಸ್ಟ್
ನೀಂದ್ ತೀರನೆ ಕಂತ್‌ಸ್ಟ್‌ಪ್ಪೆರ್, ದುಃಖಿತ್ ನರಕೊಂತುಳ್ಳೆ

(ತುಳು ಮಹಾಭಾರತ: ಸಂಧಿ-೧; ಪಾಡ್-೩೦)

ಅರುಣಾಬ್ಜನು ತನಗಿಂತ ಮೊದಲು ಕೃತಿರಚನೆಮಾಡಿದ ಎಲ್ಲ ತುಳು ಕವಿಗಳನ್ನೂ, ಕಾವ್ಯಗಳನ್ನೂ ಸಹ ಮುಕ್ತಕಂಠದಿಂದ ಪ್ರಶಂಸಿಸಿದ್ದಾನೆ. ಆದರೆ ವಿಷ್ಣುತುಂಗನನ್ನು ಆತ ಸ್ತುತಿಸದಿರುವ ಕಾರಣ, ವಿಷ್ಣುತುಂಗನು ಅವನಿಗಿಂತ ಅನಂತರದವನು ಎಂಬುದರಲ್ಲಿ ಸಂದೇಹವೇ ಇಲ್ಲ. ಹಾಗೆಯೇ ಕನ್ನಡದ ಕವಿ ಕುಮಾರವ್ಯಾಸನನ್ನು ಸ್ತುತಿಸಿದ ವಿಷ್ಣುತುಂಗನು ಅರುಣಾಬ್ಜನನ್ನಾಗಲಿ, ಇತರ ತುಳು ಕವಿಗಳನ್ನಾಗಲಿ ಸ್ತುತಿಸದಿರುವುದೂ ಸೋಜಿಗವಾಗಿದೆ. ಆದರೆ ಕವಿ ತನ್ನ ಕಾವ್ಯ ಮಾರ್ಗದ ಗುರುವಾದ ಆರಾಧ್ಯ(ಚಾಟುವಿಠಲನಾಥ/ನಿತ್ಯಾತ್ಮಶುಕಯೋಗಿ)ನನ್ನು ಮಾತ್ರ ಸ್ತುತಿಸಲು ಮರೆಯಲಿಲ್ಲ. ಮೇಲಿನ ತುಳು ಪದ್ಯವು ಚಾಟುವಿಠಲನಾಥನ 'ಮಂದಭಾಗ್ಯರಲಾ ಮನುಷ್ಯರು ಮಂದಮತಿಗಳಲಾ ವೃಥಾಶ್ರಮದಿಂದ ಮಂದೋದ್ಯೋಗಿಗಳು' ಎಂಬ ಕನ್ನಡ ಪದ್ಯದ ಭಾವಾನುವಾದದ ರೂಪದಲ್ಲಿದೆ. [ನೋಡಿ:

ದ್ದಾನೆಂದು ಗ್ರಹಿಸಿದರೆ, ರವಿಯು ಕನ್ಯಾರಾಶಿಯ 15°ಯ ಅನಂತರ ಧನುರಾಶಿಯ ಮೊದಲ 15°ಯ ಒಳಗೆ ಇರಬೇಕು. ಈ ರವಿಯ ಹಿಂದೆ ಅಥವಾ ಮುಂದೆ 30° ಅಂತರದೊಳಗೆ ಬುಧನಿರಬೇಕು. ವೃಷಭದಲ್ಲಿರುವ ಚಂದ್ರನೊಂದಿಗೆ ಬುಧನಿರುವುದು ಸರ್ವಥಾ ಸಾಧ್ಯವಿಲ್ಲ.

ಕನ್ನಡ ಭಾಗವತ: ೧-೧-೧೭] ಈ ಪದ್ಯವು ಅರುಣಾಬ್ಜನ ಮಹಾಭಾರತದಲ್ಲಿ ಹೇಗೆ ಸೇರ್ಪಡೆಯಾಯಿತು... ಎಂಬ ಪ್ರಶ್ನೆಯೂ ಹುಟ್ಟುತ್ತದೆ.

ಈ ಪ್ರಮಾದಕ್ಕೆ ಕಾರಣ ನಮ್ಮ ಲಿಪಿಕಾರರು. ಅವರು ಶುದ್ಧ ಲಿಪಿಕಾರರೇ ಹೊರತು, ಗ್ರಂಥಸಂಪಾದಕರಲ್ಲ; ಅವರು ಹೊಸ ಪಾಠಾಂತರಗಳನ್ನು ನಿರ್ಮಿಸಿಯಾರೇ ಹೊರತು ಹಳೆಯ ಪಾಠಾಂತರಗಳನ್ನು ಪ್ರಸ್ತಾವಿಸಲಾರರು. ಅವರು ತಮಗೆ ಇಷ್ಟವಾದ ವಿಷಯಗಳನ್ನು ಯಾವ ಮೂಲದಿಂದಲೂ ಆಯ್ದುಕೊಳ್ಳಲು ಸ್ವತಂತ್ರರು. ಪ್ರಕೃತ ನಮಗೆ ದೊರೆತಿರುವ ಈ ತುಳು ಮಹಾಭಾರತವು ಕವಿಯ ಸ್ವಹಸ್ತದ ಪ್ರತಿಯಲ್ಲ ಕಾಸರಗೋಡಿನ ಉರ್ಮಿಯೆಂಬಲ್ಲಿರುವ ವಿಷ್ಣು ನಲ್ಲೂರಾಯನು ಈ ತಾಳೆಗರಿಯ ಪ್ರತಿಯನ್ನು ಬರೆದುದೆಂದು ಆತನೇ ಗ್ರಂಥಾಂತ್ಯದಲ್ಲಿ ಉಲ್ಲೇಖಿಸಿದ್ದಾನೆ. ತುಳು ಭಾಗವತವನ್ನು ರಚಿಸಿದ ವಿಷ್ಣು ತುಂಗನೂ ಕಾಸರಗೋಡು ಪ್ರದೇಶದವನಾದುದರಿಂದ, ಮಹಾಭಾರತದ ಲಿಪಿಕಾರನು, ತುಳು ಭಾಗವತವನ್ನು ಓದಿರುವ ಸಾಧ್ಯತೆಯೂ ಇರುವುದರಿಂದ ಆತನೇ ತನಗೆ ಇಷ್ಟವಾದ ಮೇಲಿನ ಪದ್ಯವನ್ನು ಸೇರಿಸಿರಲೂಬಹುದು. ಈ ಕಾರಣದಿಂದಾಗಿ ಮೇಲಿನ ಗೊಂದಲವು ಸೃಷ್ಟಿಯಾಗಿದೆ ಎನ್ನಬಹುದು. ವಿಷ್ಣುತುಂಗನು ಅರುಣಾಬ್ಜನ ಮಹಾಭಾರತವನ್ನು ಓದಿರದಿದ್ದರೂ, ಬೇರೆ ತುಳುಕಾವ್ಯಗಳನ್ನಂತೂ ಖಂಡಿತ ಓದಿದ್ದಾನೆ. ಇಲ್ಲದಿದ್ದರೆ ಅರುಣಾಬ್ಜನ ಕಾಲಕ್ಕಿಂತಲೂ ಮೊದಲೇ ರೂಪುಗೊಂಡಿರುವ ತುಳುಕಾವ್ಯ ಪರಂಪರೆಯ ಆ ಶೈಲಿ ಅವನ ಕಾವ್ಯದಲ್ಲಿ ಮೂಡಿಬರುವುದು ಹೇಗೆ?

ತುಳುಭಾಗವತದ ಪ್ರಸ್ತಾವನೆಯ ಪುನಃಪರಿಶೀಲನೆ:

ಅರುಣಾಬ್ಜನ ಕಾವ್ಯವನ್ನು ಓದಿದ ಬಳಿಕ, ವಿಷ್ಣುತುಂಗನ ಭಾಗವತದ ಪ್ರಸ್ತಾವನೆಯಲ್ಲಿ ನಾನು ಬರೆದ ಅನೇಕ ವಿಚಾರಗಳನ್ನು ಪುನಃ ಪರಿಶೀಲಿಸಬೇಕಾಗಿ ಬಂತು:

೧. ವಿಷ್ಣುತುಂಗನ ಭಾಗವತದಲ್ಲಿ ಕ್ಷಣೊ ಬೀಜೊ ಔಷಧೊ ಅವತಾರೊ ಇತ್ಯಾದಿ ಒಕಾರಾಂತ ಪದಗಳಿವೆ. ಹಾಗೆಯೇ ಗೆಂಗೆ, ಗೆಡಿ, ರೆಚೀಪು, ದೆರ್ಶಿಪು –ಇತ್ಯಾದಿ ಪದಗಳಲ್ಲಿ, ಪದಾದಿಯ ಅಕಾರದ ಕಾಗುಣಿತವು ಎಕಾರವಾಗಿ ಪರಿವರ್ತನೆಗೊಂಡದ್ದನ್ನೂ ಕಾಣುತ್ತೇವೆ. ಅಲ್ಲದೆ, ಸಾರ್ಪು, ಆಪು, ಅತ್ ಇತ್ಯಾದಿ ಕೆಲವು ಅಪೂರ್ವ ಪದಗಳೂ ಇದೆ.

ಈ ಎಲ್ಲ ವಿಶಿಷ್ಟ ಪ್ರಯೋಗಗಳು ಪ್ರಕೃತ ಕಾಸರಗೋಡು ಪ್ರದೇಶದ ಕೆಲವು ಜನಪದರಲ್ಲಿ ರೂಢಿಯಲ್ಲಿರುವುದರಿಂದ ವಿಷ್ಣುತುಂಗನು ಕಾಸರಗೋಡು ಪ್ರದೇಶದ ಕವಿಯಿರಬೇಕು –ಎಂದು ನಾನು ಭಾಗವತದ ಪ್ರಸ್ತಾವನೆಯಲ್ಲಿ [ನೋಡಿ: ಪುಟ–೯] ಬರೆದಿದ್ದೆ. ಆದರೆ ಉಡುಪಿ ಪರಿಸರದ ಕವಿಯೆಂದು ನಿರ್ಧರಿಸಲಾದ ಅರುಣಾಬ್ಜನ ಕಾವ್ಯದಲ್ಲೂ ಈ ರೀತಿಯ ಪದಪ್ರಯೋಗಗಳಿರುವುದರಿಂದ ವಿಷ್ಣುತುಂಗನ ಹುಟ್ಟೂರಿನ ನಿರ್ಣಯಕ್ಕೆ ಈ ಆಧಾರಗಳು ಪರ್ಯಾಪ್ತವಲ್ಲ; ಹಾಗಾಗಿ, ಪ್ರಸ್ತಾವನೆ

ಯಲ್ಲಿ ಬರೆದಿರುವ ಇತರ ಆಧಾರಗಳಿಂದಲೇ ವಿಷ್ಣುತುಂಗನ ಹುಟ್ಟೂರಿನ ನಿರ್ಣಯವಾಗಬೇಕಾಗಿದೆ -ಎಂಬುದು ಇಲ್ಲಿ ತಿದ್ದಿಕೊಳ್ಳಬೇಕಾದ ಅಂಶ.

೨. ವಿಷ್ಣುತುಂಗನ ಕಾವ್ಯವೇ ತುಳುವಿನ ಆದಿಕಾವ್ಯ ಎಂಬ ಮಾತನ್ನು ತುಳು ಭಾಗವತದ ಪ್ರಸ್ತಾವನೆಯಲ್ಲಿ ಸೂಚಿಸಿದ್ದೇನೆ. ಆದರೆ ವಿಷ್ಣುತುಂಗನಿಗಿಂತ ಮೊದಲಿನವನಾದ ಅರುಣಾಬ್ಜನಿಗಿಂತಲೂ ಮೊದಲೇ ತುಳುವಿನಲ್ಲಿ ಕಾವ್ಯಕ್ರಿಯೆ ನಡೆದ ಬಗ್ಗೆ ಸೂಚನೆಗಳು ಸಿಕ್ಕುವುದರಿಂದ, ತುಳುವಿನ ಆದಿಕಾವ್ಯ ಯಾವುದೆಂದು ನಿರ್ಣಯವಾಗಿ ಹೇಳಲು ಸಾಧ್ಯವಿಲ್ಲದಂತಾಗಿದೆ.

೩. ವಿಷ್ಣುತುಂಗನು ಛಂದಸ್ಸಿನಲ್ಲಿ ಹೊಸ ಪ್ರಯೋಗವನ್ನು ಮಾಡಿದ ಕವಿ ಎಂದೂ ಭಾಗವತದ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ್ದೇನೆ. ಆದರೆ ವಿಷ್ಣುತುಂಗನ ಕಾವ್ಯದಲ್ಲಿ ಕಂಡುಬರುವ ಎಲ್ಲ ಛಂದೋವೈವಿಧ್ಯವೂ ಅರುಣಾಬ್ಜನ ಕಾವ್ಯದಲ್ಲಿಯೂ ಇರುವುದರಿಂದ, ಆ ಕೀರ್ತಿಯೂ ವಿಷ್ಣುತುಂಗನಿಗೆ ಸಲ್ಲತಕ್ಕದ್ದಲ್ಲ -ಎಂದು ಹೇಳದೆ ನಿರ್ವಾಹವಿಲ್ಲ.

ತುಳುವಿನ ಛಂದೋವೈವಿಧ್ಯ:

ತುಳು ಕಾವ್ಯಪರಂಪರೆಗೆ ತುಳುವಿನದ್ದೇ ಆದ ಒಂದು ಛಂದೋಮಾರ್ಗವೂ ಇದೆಯೆಂಬ ಅಂಶವನ್ನು ನಾವು ಗಮನಿಸಬೇಕಾಗಿದೆ. ವಿಷ್ಣುತುಂಗನಾಗಲಿ, ಅರುಣಾಬ್ಜನಾಗಲಿ ಕನ್ನಡಕಾವ್ಯಗಳ ಮಾರ್ಗದರ್ಶನದಿಂದಲೇ ತಮ್ಮ ಕಾವ್ಯಗಳನ್ನು ಸೃಷ್ಟಿಸಿಕೊಂಡರಾದರೂ, ಅವರು ಕನ್ನಡ ಛಂದಸ್ಸಿನ ಆಕರ್ಷಣೆಗೆ ಒಳಗಾಗಲಿಲ್ಲ. ಇಬ್ಬರ ಕಣ್ಣಮುಂದೆಯೂ ಕನ್ನಡ ಭಾಮಿನಿಷಟ್ಪದಿಯ ಸಾಗರವೇ ಇದೆ. ಆದರೂ ಅವರು ಆ ಸಾಗರದ ವೈಭವಕ್ಕೆ ಮಾರುಹೋಗದೆ, ತಮ್ಮದೇ ಆದ ಒಂದು ಕಾವ್ಯಪರಂಪರೆಯನ್ನು ಉಳಿಸಿಕೊಂಡು ಬರುವವರಂತೆ, ಅಥವಾ ಯಾವುದೋ ಒಂದು ಸಂಪ್ರದಾಯಕ್ಕೆ ಬದ್ಧರಾಗಿರುವವರಂತೆ ಕಾವ್ಯರಚನೆ ಮಾಡಿರುವುದು ಕಂಡುಬರುತ್ತದೆ. ತುಳು ಕಾವ್ಯಸಂಪ್ರದಾಯದಲ್ಲಿ ಕಾಣಿಸುವ ಆ ಛಂದೋವೈವಿಧ್ಯ ಹೀಗಿದೆ–

ಮಲ್ಲಿಕಾಮಾಲೆ	(ಶ್ರೀಭಾಗವತೊ, ಮಹಾಭಾರತೊ, ಕಾವೇರಿ)
ತೋಟಕ	(ಶ್ರೀಭಾಗವತೊ, ಮಹಾಭಾರತೊ)
ತೋಟಕಜನ್ಯ (ದೀರ್ಘ)	(ಶ್ರೀಭಾಗವತೊ, ಮಹಾಭಾರತೊ, ಕಾವೇರಿ)
ವನಮಯೂರ	(ಶ್ರೀಭಾಗವತೊ, ಕಾವೇರಿ)
ಚಿತ್ರಪದ	(ಶ್ರೀಭಾಗವತೊ)
ದ್ರುತವಿಲಂಬಿತಜನ್ಯ	(ಶ್ರೀಭಾಗವತೊ)
ಅಂಶಗಣ ಷಟ್ಪದಿ	(ಶ್ರೀಭಾಗವತೊ, ಮಹಾಭಾರತೊ)

ಕನ್ನಡ ಸಾಹಿತ್ಯದಲ್ಲಿ 'ಖ್ಯಾತ ಕರ್ನಾಟಕ'ಗಳಿದ್ದ ಹಾಗೆ ತುಳು ಸಾಹಿತ್ಯದಲ್ಲಿ ಈ ವೃತ್ತ-ಷಟ್ಪದಿಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ತೋಟಕಜನ್ಯ(ದೀರ್ಘ)ವೃತ್ತ ಮತ್ತು

ದ್ರುತವಿಲಂಬಿತಜನ್ಯ ವೃತ್ತವೂ ತುಳುಕವಿಗಳದ್ದೇ ಕೊಡುಗೆಯೆನ್ನಬಹುದು. ತೋಟಕ ವೃತ್ತದ (ಸಸಸಸ) ಚರಣಗಳಿಗೆ ಇನ್ನೂ ಎರಡು ಸಗಣಗಳನ್ನೂ, ಒಂದು ಗುರುವನ್ನೂ ಸೇರಿಸಿ ಮಾಡಿದ ವೃತ್ತವನ್ನೇ (ಸಸಸಸ-ಸಸಗ) ಇಲ್ಲಿ ತೋಟಕಜನ್ಯ(ದೀರ್ಘ)ವೃತ್ತ ವೆಂದು ಹೆಸರಿಸಿದ್ದೇನೆ. ತುಳು ಕಾವ್ಯಗಳಲ್ಲಿ ತುಂಬ ಬಳಕೆಯಲ್ಲಿರುವ ವೃತ್ತವಿದು. ತುಳುಭಾಗವತವು ಪ್ರಾರಂಭವಾಗುವುದೇ ಈ ವೃತ್ತದಿಂದ.

ಹಾಗೆಂದು ತುಳು ಕಾವ್ಯಗಳಲ್ಲಿ ಬರುವ ಎಲ್ಲ ವೃತ್ತಗಳನ್ನೂ ಈ ಮಾಪನ ದಿಂದಲೇ ಅಳೆದುನೋಡಲು ಸಾಧ್ಯವಿಲ್ಲ. ಯಾಕೆಂದರೆ ತುಳು ಕವಿಗಳಿಗೆ ಸಂಸ್ಕೃತ ವೃತ್ತಗಳ ನಡೆ ಮತ್ತು ಲಯಗಳು ಮುಖ್ಯವೇ ಹೊರತು ಅಕ್ಷರಗಣದ ನಿಯಮಗಳು ಮುಖ್ಯವಲ್ಲ; ಆ ನಿಯಮವನ್ನು ಅವರು ಪಾಲಿಸಿದರೂ ಆಯಿತು; ಬಿಟ್ಟರೂ ಆಯಿತು. ಅನೇಕ ಸಂದರ್ಭಗಳಲ್ಲಿ ಅವರು ಅಕ್ಷರಗಣವನ್ನು ಮಾತ್ರಾಗಣವಾಗಿ ಪರಿವರ್ತಿಸಿಕೊಂಡದ್ದೂ ಇದೆ. ಅಕ್ಷರಗಣದ ಒಂದು ಗುರುವನ್ನು ಎರಡು ಲಘುವಾಗಿಯೂ, ಎರಡು ಲಘುಗಳನ್ನು ಒಂದು ಗುರುವಾಗಿಯೂ ಮಾರ್ಪಡಿಸುವ ಸ್ವಾತಂತ್ರ್ಯವನ್ನು ಅವರು ಇಟ್ಟುಕೊಂಡಿದ್ದಾರೆ. ಮಲ್ಲಿಕಾಮಾಲಾವೃತ್ತದ ಪ್ರಾರಂಭದ ಗುರುವನ್ನು ಎರಡು ಲಘುವಾಗಿ ಪರಿವರ್ತಿಸಿಕೊಂಡರೆ ಅದು ತರಳವೃತ್ತವೆನಿಸುವುದು. ಅನಂತರದ ಯಾವುದಾದರೂ ಗುರುವನ್ನು ಎರಡು ಲಘುಗಳಾಗಿ ಪರಿವರ್ತಿಸಿ ಕೊಂಡರೆ..... ಆಗ ಅದು ಬೇರೆಯೇ ವೃತ್ತವೆನಿಸುವುದು. ಅಂತಹ ಅನೇಕ ಹೊಸ ವೃತ್ತಗಳನ್ನು ಇಲ್ಲಿ ಪಟ್ಟಿಮಾಡಬಹುದು. ಆದರೆ ಇಲ್ಲಿ ಕೆಲವು ಮುಖ್ಯವಾದ ವೃತ್ತಗಳನ್ನು ಮಾತ್ರ ಪ್ರಸ್ತಾವಿಸಿದ್ದೇನೆ. ಈ ರೀತಿಯ ವೃತ್ತಪರಿವರ್ತನೆ ಗಳನ್ನು ತುಳು ಕಾವ್ಯಗಳ ಉದ್ದಕ್ಕೂ ನಾವು ಕಾಣಬಹುದು. ಹಾಗಾಗಿ ಇಲ್ಲಿಯ ಅನೇಕ ವೃತ್ತಗಳನ್ನು, ವೃತ್ತಗಳೆಂದು ಕರೆಯುವುದಕ್ಕಿಂತಲೂ 'ವೃತ್ತಧಾಟಿ'ಗಳೆಂದು ಕರೆಯುವುದೇ ಲೇಸಾಗ ಬಹುದು. ಅರುಣಾಬ್ಜನು ಇವನ್ನೆಲ್ಲ ಒಟ್ಟಾಗಿ 'ಪಾಡ್' ಎಂಬ ಹೆಸರಿನಿಂದ ಕರೆದಿದ್ದಾನೆ. ತುಳು ಜನಪದ ಸಾಹಿತ್ಯದಲ್ಲಿ 'ಪಾಡ್ದನ'ಗಳಿದ್ದಂತೆ, ಶಿಷ್ಟಸಾಹಿತ್ಯದಲ್ಲಿ 'ಪಾಡ್'ಗಳಿವೆ ಎಂಬುದು ಇಲ್ಲಿ ಗಮನಾರ್ಹವಾದ ವಿಚಾರ.

ಅಂಶಗಣ ಷಟ್ಪದಿ:

ಸಂಸ್ಕೃತ ಛಂದಸ್ಸಿನಿಂದ ಪ್ರಭಾವಿತವಾದ ತುಳುವಿನ ಕಾವ್ಯಮಾರ್ಗದಲ್ಲಿ ದ್ರಾವಿಡ ಛಂದಸ್ಸುಗಳಲ್ಲೊಂದಾದ ಅಂಶಗಣ ಷಟ್ಪದಿಯೂ ಸೇರಿಕೊಂಡಿರುವುದು ಕುತೂಹಲದ ಸಂಗತಿಯಾಗಿದೆ. ತುಳು ಭಾಗವತದಲ್ಲಿ ಅಂಶಗಣ ಷಟ್ಪದಿಯು ಅಲ್ಪಮಾತ್ರವಿದ್ದರೆ, ತುಳು ಮಹಾಭಾರತದಲ್ಲಿ ಇದು ಅಧಿಕ ಪ್ರಮಾಣದಲ್ಲಿ ಪ್ರಯೋಗಗೊಂಡಿದೆ.[೩]

---

೩. ತುಳು ಭಾಗವತದಲ್ಲಿ ನಾನು ಅಂಶಗಣದ ಭ್ರಾಂತಿಯನ್ನು ಹುಟ್ಟಿಸುವ ಕೆಲವು ಅಪೂರ್ವ ವೃತ್ತಗಳಿವೆ ಎಂದು ಪ್ರಸ್ತಾವಿಸಿದ್ದನ್ನು, ಇನ್ನಷ್ಟು ವಿಶ್ಲೇಷಣೆ ಮಾಡಿ, ಅವು ಅಂಶಗಣ ಷಟ್ಪದಿಗಳೆಂದು ಗುರುತಿಸಿದವರು ಮಿತ್ರರಾದ ಶ್ರೀ ಪಾದೇಕಲ್ಲು ವಿಷ್ಣು ಭಟ್ಟರು. ಆ ಕೀರ್ತಿ ಅವರಿಗೆ ಸಲ್ಲಬೇಕು. [ನೋಡಿ: ಕರ್ನಾಟಕ ಲೋಚನ ೩-೨, ದಶಂಬರ ೯೦, ಪುಟ ೩೮]

೧. ಅಂಶಗಣ ಷಟ್ಪದಿ:

ಕನ್ನಡದಲ್ಲಿ ಅಂಶಗಣ ಷಟ್ಪದಿಯನ್ನು ಮೊದಲಾಗಿ ಪ್ರಸ್ತಾವಮಾಡಿದವನು ನಾಗವರ್ಮ (ಕ್ರಿ. ಶ. ೯೯೦); ಜಯಕೀರ್ತಿಯ (ಕ್ರಿ. ಶ. ೧೦೫೦) ಛಂದೋನು ಶಾಸನದಲ್ಲೂ ಈ ಬಗ್ಗೆ ವಿವರಣೆ ಸಿಗುತ್ತದೆ. ಸೋಮೇಶ್ವರ (ಕ್ರಿ. ಶ. ೧೧೨೯), ಶಾರ್ಙ್ಗದೇವ (ಕ್ರಿ. ಶ ೧೨೫೦) ಮುಂತಾದವರು ಇದು ಕನ್ನಡ ಛಂದಸ್ಸೆಂದೇ ಸಾರಿದ್ದಾರೆ. ಆದರೆ ಕನ್ನಡದಲ್ಲಿ ಇದು ಪ್ರಯೋಗಗೊಂಡ ಉದಾಹರಣೆಗಳು ಮಾತ್ರ ಅತ್ಯಂತ ವಿರಳ. ಇಂತಹದನ್ನು ತುಳುವರು ಎತ್ತಿಕೊಂಡು ಸಾರಾಸಗಟಾಗಿ ಪ್ರಯೋಗ ಮಾಡಿರುವುದು ಆಶ್ಚರ್ಯವೆನಿಸುತ್ತದೆ.

ಒಂದು ಎರಡು ನಾಲ್ಕು ಐದನೆಯ ಸಾಲುಗಳಲ್ಲಿ ಎರಡೆರಡು ವಿಷ್ಣುಗಣಗಳೂ, ಮೂರು ಆರನೆಯ ಸಾಲುಗಳಲ್ಲಿ ಎರಡು ವಿಷ್ಣುಗಣ ಮತ್ತು ಒಂದು ರುದ್ರಗಣವೂ ಇರುವುದು ಅಂಶಗಣ ಷಟ್ಪದಿಯ ಲಕ್ಷಣ:

ಕ್ಷೋಣಿ ವಲ್ಲಭ ಕೇಳ್ ।
ನಾಣಿಲಾ ಕಥೆ ಮಿತ್ತ್ ।
ಕ್ಷೀಣೊಮಾವನತೆತ್ತೀ ಮತಿಯುಳ್ಳಾರ್ ।
ಝಾಣೇ ಯೆಡ್ಡ ಪವಿತ್ರ ।
ಶ್ರೇಣೀ ಯೆಡ್ಡ ದಿನೊಂಟ್ ।
ದ್ರೋಣಾಚಾರ್ಯೆರೆಕಾ ಪುತ್ರೆರೆ ಕೈಕೊಟ್ಟೆರ್

ತನ್ನ ಕಾವ್ಯದ ಎಲ್ಲ ವೃತ್ತಗಳಲ್ಲೂ, ಷಟ್ಪದಿಗಳಲ್ಲೂ ಕವಿಯು ದ್ವಿತೀಯಾಕ್ಷರ ಪ್ರಾಸವನ್ನು ತರಲು ಯತ್ನಿಸಿದ್ದಾನೆ. ಅನಿವಾರ್ಯವಾಗಿ ಕೆಲವೆಡೆ ಪ್ರಾಸಭಂಗವಾದ ಉದಾಹರಣೆಗಳೂ ಇಲ್ಲದಿಲ್ಲ.

೨. ಮಲ್ಲಿಕಾಮಾಲಾವೃತ್ತ:

ರ ಸ ಜ ಜ ಭ ರ
ಸೌರಭೊಂ । ಕುಳೆ ಸಾ । ರ ಸಂಗ್ರ । ಹಿತ್ತ್ತಿ । ಪಾತ್ರೊಮೊ । ಸೃಷ್ಟಿತಾ ।
ಚಾರು ಸೌಂದರಿಯೊಂತ ಬೀಜೊಮೊ ಭೂಷಣೊಂಕುಳೆ ಪುಂಜೊಮೊ
ನಾರಿ ದ್ರೌಪತಿ ವರ್ಣಿನಾ ಪಯಣಂತ ಸಂಭ್ರಮೊಮೋಂದ್‌ತ್
ಏರ ವಿಸ್ಮಯೊ ಪ್ರಾಪಿತ್ ಪುಗಟ್‌ಪ್ಪೆರಾ ವಿಬುಧೇರ್ಕುಳು

(ಸಂಧಿ–೧೩; ಪಾಡ್–೧)

ಮಲ್ಲಿಕಾಮಾಲಾವೃತ್ತದ ಪ್ರಾರಂಭದ ಗುರುವನ್ನು ಎರಡು ಲಘುವಾಗಿ ಪರಿವರ್ತಿಸಿ ಮಾಡಿದ ವೃತ್ತ ಹೀಗಿದೆ.೪

ಪೆರಿಯ ವೀಥಿತ ರಾಜಧಾನಿಯ ಅಡ್ಡಕೇರಿಕುಳೌಳವು
ನಿರೆತ್ ಕುಳ್ಪೆರಾರೆ ಮಂಚಕ್ಕು ಮಾಡೊಗೋಪುರಮಂಬೆಲೊ
ತುರಗಮಂದಿರೊಮಾನೆಶಾಲೆಯ ಗೋಗೃಹಂಕುಳೆ ಚೊವುಟಾ
ಮರಟ ಮಣ್ಣಟ ಶಿಲೆಟ ಸ್ವಾತ್‌ನ ಮಾಂತಲಾ ಕನಕಂತವೇ

(ಸಂಧಿ-೧೮, ಪಾಡ್-೬೯)

೩. ತೋಟಕವೃತ್ತ:

ಸ ಸ ಸ ಸ
ಕುರುಭೂ । ಪತಿ ವೆಂ । ದ್ಣ ನಂ । ಕ್ ಹಿತೊ ।
ಪರಲೋಕ ಹಿತಾರ್ಥತೆಯಾಸ್ಟ್ಣ್‌ತೇ
ಪರ್ಸೋಚ್ಚಿಟ್ ಲೋಹೊಮಿನೊಡ್ಡ್‌ಡ್‌ಸ್ಟೀ
ಪರಿಶಾಸ್ಟ್ಣ್ ನಂಕ್‌ಂಗೆಬುಳೆಂದೆರ್‌ನಾ

ತೋಟಕವೃತ್ತದ ಪ್ರಾರಂಭದ ಲಘುವನ್ನು ಗುರುವಾಗಿ ಪರಿವರ್ತಿಸಿ ಮಾಡಿದ ವೃತ್ತ ಹೀಗಿದೆ:

ತಂದೆತಾಯಿಕುಳುಳ್ಳೆರತಾಪಿನ್‌ಕ್
ಬಂಧುವರ್ಗೊಮ ಗೋಧನೊಮುಂಡಧಿಕಂ
ಕುಂದ್‌ದಂತಿ ಮಹಾಬಲವೀರ್ಯಕೆನಾ
ಛಂದೊಮುಂಡಿನ ಲಕ್ಷಣ ಸೌಂದರಿಯಂ (ಸಂಧಿ-೮, ಪಾಡ್-೧೫)

ತುಳು ಭಾಗವತದಲ್ಲಿ ದ್ರುತವಿಲಂಬಿತದ ನಡೆಗೆ ಹೊಂದಿಸಿ ಮೇಲಿನ ವೃತ್ತದ ಲಕ್ಷಣವನ್ನು ತಿಳಿಸಲಾಗಿದೆ. [ನೋಡಿ: ತುಳು ಭಾಗವತ ಪ್ರಸ್ತಾವನೆ: ಪುಟ-೩೪.]

೪. ತೋಟಕಜನ್ಯ(ದೀರ್ಘ)ವೃತ್ತ:

ತೋಟಕವೃತ್ತದ ಚರಣಗಳಿಗೆ ಇನ್ನೂ ಎರಡು ಸಗಣಗಳನ್ನೂ ಒಂದು ಗುರುವನ್ನೂ ಸೇರಿಸಿ ಮಾಡಿದ ಹೊಸ ವೃತ್ತ ಹೀಗಿದೆ:

ಸ ಸ ಸ ಸ ಸ ಸ ಗ
ದಿನನಾ । ಥನಿವಂ। ದಿತ್ ಪಾಂ । ಡುಸುತೇ । ಮಗ್‌ಟ್ । ಪ್ಪುಣ ಚೊ । ಸ್ಟ್
ವನವಾಸಿಕುಳಾಸ್ಟಿ ಮಹರ್ಷಿಕುಳೂ ಭೂ‌ದೇವಿಕ ಕೂಡ

೪. ಇದನ್ನು ಕನ್ನಡದಲ್ಲಿ ತರಳವೃತ್ತವೆಂದೂ, ಮಲೆಯಾಳದಲ್ಲಿ ಭ್ರಮರಾವಲೀ ವೃತ್ತವೆಂದೂ ಕರೆಯುವರು.
೫. ಇಲ್ಲಿ 'ಲಘೂಚ್ಚಾರ'ವಿದೆ.

ತನವಂಶಜೆರಾಸ್ಪಿನ ಪೂರ್ವಜೆರೇ ಗಣನಾಥನ ಕೂಡ
ಮನಸಾ ಹೃದಯಂತುಳೆಯೀ ನಿನೆತ್ ಕೈ[೭] ಯಂಜಲಿ ಪತ್ಯೆ.

ಮೇಲಿನ ವೃತ್ತದ ಪ್ರಾರಂಭದ ಎರಡು ಲಘುಗಳನ್ನು ಒಂದು ಗುರುವಾಗಿ ಪರಿವರ್ತಿಸಿದ ವೃತ್ತ ಹೀಗಿದೆ:

ಇಂ ಚಾಕುಳೆ ವಂದಿತ್ ಪಾಂಡುಸುತೇ ಮಗ್‌ಟ್‌ಪ್ಪುಣ ಚೂಸ್ಟ್
ಅಂಚಾವುಟ- ಪೋಸ್ಸನುಭೈಪ್ಪು ಶುಭಾಶುಭೊನಾಮುತೆನೆಂದ್
ಪಂಚಾನನಟೊತ್ತಿ ಮಹೀಸುರೆರ್ ಪಣಪಾಪಸ್ಟೆ[೮]ಕೇಂಡ್
ಪಂಚಾಯುಧತುಲ್ಯೆ ಮಹಾಪಥೊಮೇ ನಡತೇ ಸಭೆಮಧ್ಯೊ

೫. ದ್ರುತವಿಲಂಬಿತಜನ್ಯ:

ದ್ರುತವಿಲಂಬಿತಜನ್ಯವೆಂದು ಹೇಳಬಹುದಾದ ವೃತ್ತಶೈಲಿಯೊಂದು ತುಳು ಭಾಗವತದಲ್ಲಿ ಪ್ರಯುಕ್ತವಾಗಿದೆ. ದ್ರುತವಿಲಂಬಿತವೃತ್ತದ ಕೊನೆಯ ಗುರುವಿನ ಮೊದಲು ಒಂದು ಲಘು ಸೇರಿಸಿ ಮಾಡಿದ ರೀತಿಯ ಹೊಸ ವೃತ್ತಗಳನ್ನು ತುಳು ಭಾಗವತದ ಒಂದನೆಯ ಸ್ಕಂಧದ ೪–೫ನೆಯ ಅಧ್ಯಾಯಗಳಲ್ಲಿ ಕಾಣಬಹುದು.

ನ ಭ ಭ ಭ ಗ
ನವರ । ಸೋಭರಿ । ತೊಂಡ್ ರ । ಚೇಪುಟ । ಲಾ
ನವವಿರಕ್ತಿಟ್ ಸೂಕ್ತಿತ್ ಚೂವುಟಲಾ
ನವಸುಶ್‌ವ್ಯಾಕರಣೊಂಕುಳೆ ಪಿಂಬುಟಲಾ
ನವವಿಭಕ್ತಿಕ್‌ಣೆದ್ದಿನ ಶ್ರೀಹರಿನಾ

ನಗಣದ ಅನಂತರ ಎರಡು ಭಗಣ ಮತ್ತು ಒಂದು ರಗಣ ಬಂದರೆ ದ್ರುತವಿಲಂಬಿತವಾಗುವುದಷ್ಟೆ. ವಿಷ್ಣುತುಂಗನ ಈ ಹೊಸ ವೃತ್ತದಲ್ಲಿ ನಗಣದ ಅನಂತರ ಮೂರು ಭಗಣವೂ ಒಂದು ಗುರುವೂ ಬಂದಿದೆ. ಇದರ ಹೊರತು ತುಳು ಭಾಗವತದಲ್ಲಿ ವನಮಯೂರ ಮತ್ತು ಚಿತ್ರಪದಾ ಎಂಬ ವೃತ್ತಗಳೂ ಪ್ರಯುಕ್ತವಾಗಿವೆ. [ನೋಡಿ: ತುಳು ಭಾಗವತ ಪ್ರಸ್ತಾವನೆ: ಪುಟ ೩೪, ೩೫, ೩೬]

ತುಳುವಿನಲ್ಲಿ ರಳಾಕ್ಷರ:

ರಳಾಕ್ಷರವು ಅರುಣಾಬ್ಜನ ಕಾವ್ಯದಲ್ಲಿ ಹೇರಳವಾಗಿ ಪ್ರಯೋಗಗೊಂಡಿದೆ. ಕನ್ನಡದಲ್ಲೂ ಮಲೆಯಾಳದಲ್ಲೂ ಈ ಅಕ್ಷರಕ್ಕೆ ಬೇರೆ ಬೇರೆ ಲಿಪಿಸಂಕೇತಗಳಿರುವ ಹಾಗೆ ತುಳುವಿನಲ್ಲೂ ಪ್ರತ್ಯೇಕವಾದ ಒಂದು ಲಿಪಿಸಂಕೇತವಿದೆ. ಇದು ಸ್ವಲ್ಪ ಮಟ್ಟಿಗೆ ಕನ್ನಡದ ರಳಕ್ಕೇ ಹತ್ತಿರವಾಗಿದೆ ಹೊರತು ಮಲೆಯಾಳದ ರಳಕ್ಕಲ್ಲ.

೬.–೭. ಇಲ್ಲಿ ಕವಿಯು ಸಗಣದ ನಿಯಮವನ್ನು ಮುರಿದಿದ್ದಾನೆ. ಇಂಥ ಉದಾಹರಣೆಗಳು ತುಳು ಕಾವ್ಯಗಳಲ್ಲಿ ಅಲ್ಲಲ್ಲಿ ಸಿಗುತ್ತವೆ. ತುಳು ಕವಿಗಳಿಗೆ ವೃತ್ತಗಳ 'ಗತಿ–ಲಯ'ಗಳು ಮುಖ್ಯವೇ ಹೊರತು ಗಣನಿಯಮಗಳು ಮುಖ್ಯವಲ್ಲ.

೮.–೯. ಇಲ್ಲಿ ಶಿಥಿಲದ್ವಿತ್ವವಿದೆ.

ಔಟ್ತ್ –(ಅಲ್ಲಿಂದ) (ಔಳ್ತ್ –ಎಂಬ ರೂಪವೂ ಇದೆ)
ಕೋಟ್ಸ್ಟ್ –(ಕೊಟ್ಟು) (ಕೊಳ್ಸ್ಟ್ –ಎಂಬ ರೂಪವೂ ಇದೆ)
ಅಟ್ –(ದುಃಖಿಸು)
ಪೆರವುಟ್ತ್ –(ಹಿಂದಿನಿಂದ)

ಅನೇಕ ಸಂದರ್ಭಗಳಲ್ಲಿ 'ರಳ'ವು 'ಕುಳ'ವಾದ ಉದಾಹರಣೆಗಳೂ ಸಿಗುತ್ತದೆ. ಅರುಣಾಬ್ಜನ ಕಾಲಕ್ಕೇ ರಳದ ಪ್ರಾಮುಖ್ಯ ಕಡಮೆಯಾಗುತ್ತಾ ಬರುತ್ತಿತ್ತು –ಎಂದೂ ಊಹಿಸಬಹುದು.

'ಸ್ಟ್' ಎಂಬ ಧ್ವನಿಸಂಕೇತ:

ಆಧುನಿಕ ತುಳುವರಿಗೆ ಅಪ್ರಿಯವಾಗಬಹುದಾದ ಹಾಗೂ ಉಚ್ಚರಿಸಲು ತುಸು ತೊಡಕಾಗಿರುವ ಅಥವಾ ನಿಜವಾದ ಉಚ್ಚಾರವೇ ಹೇಗೆಂದರಿಯದ ಈ ಧ್ವನಿಸಂಕೇತವು ತುಳುವಿನ ಎಲ್ಲ ಹಳೆಯ ಕಾವ್ಯಗಳಲ್ಲೂ ಕಂಡುಬಂದಿದೆ. ಅರುಣಾಬ್ಜನ ಕಾವ್ಯದಲ್ಲಂತೂ ಇದು ಹೇರಳವಾಗಿ ಪ್ರಯೋಗಗೊಂಡಿದೆ.[೧೦]

ಅಪೂರ್ಣ ಭೂತಕಾಲದಲ್ಲಿ ಇದು ಹೆಚ್ಚು ಬಳಕೆಯಲ್ಲಿದೆ.

ಉಬ್ಬುಸ್ಟ್ – ಉಬ್ಬಿ
ವರ್ಪೊಸ್ಟ್ – ಬರಿಸಿ
ಚೂಸ್ಟ್ – ನೋಡಿ
ಆಸ್ಟ್ – ಆಗಿ
ಅರಿಸ್ವಾಸ್ಟ್ – ಅಸಾಧ್ಯವಾಗಿ
ಪಾಯಿಡ್ಸ್ಟ್ – ಹಾಕಿ

ಇತರ ಕೆಲವು ಕ್ರಿಯಾರೂಪಗಳಲ್ಲೂ ಇದು ಕಾಣಿಸಿಕೊಳ್ಳುತ್ತದೆ.

ಆಕಸ್ಟರ್ – ಆಗಿದ್ದೀರಿ
ಪತ್ತಸ್ಟೆನ್ – ಹಿಡಿಯೆನು
ಪೋಸ್ಟ್ಣ್ – ಹೋಗಿದೆ
ಬೆನ್ಪೊಸ್ಟೆ – ಮಾಡಿಸಿದನು
ಪೊಲಿಪೋಸ್ಟೆ – ಜರಗಿಸಿದನು
ಅ್ಡೆಯಾಡ್ಸ್ಟೆರ್ –ಸಂಚರಿಸಿದರು
ಪುಷ್ಸ್ಟೆ – ಹುಟ್ಟಿದನು
ಏಸ್ಟೆರ್ – ಹೇಳಿದರು
ಮುಂಗ್ಸ್ಟ್ತ್ತೆ – ಮುಳುಗಿದ್ದನು.

---

೧೦. ಇದರ ವಿಸ್ತೃತವಾದ ವಿಮರ್ಶೆಗೆ ತುಳು ಭಾಗವತದ ಪ್ರಸ್ತಾವನೆ (ಪುಟ ೧೭–೨೦) ನೋಡಿರಿ.

ಸಂಸ್ಕೃತ ಪದಗಳಿಗೆ 'ಇಪು' (=ಇಸು) ಪ್ರತ್ಯಯ ಹಚ್ಚಿ ಮಾಡಿದ ಕ್ರಿಯಾರೂಪಗಳಿಗೆ ಇದು ಬಾಧಕವಾಗುವುದಿಲ್ಲ. ಅಂಥ ಕಡೆಗಳಲ್ಲಿ 'ಇತ್' ಎಂಬ ಪ್ರತ್ಯಯ ಬರುತ್ತದೆ:

ಈಕ್ಷಿತ್
ಸಂತೋಷಿತ್
ಶೋಭಿತ್
ಭೂಷಿತ್
ಅಹಂಕರಿತ್

ಆದರೂ ಅಪೂರ್ವವಾಗಿ ಕೆಲವೆಡೆ 'ಸ್ಟ್' ಕಾಣಿಸಿಕೊಂಡ ಉದಾಹರಣೆಗಳೂ ಇವೆ:

ಭಜಿಸ್ಟೀತಳ್ – ಭಜಿಸಿದಳು
ವಚಿಸ್ಟೀತೆರ್ – ಹೇಳಿದರು.

ತುಳು ಧಾತುಗಳಿಗೂ ಕೆಲವೆಡೆ 'ಇತ್' ಪ್ರತ್ಯಯ ಬರುವುದಿದೆ:

ತೆಳಿತ್ –(ನಕ್ಕು)
ತದೆತ್ –(ಹೊಡೆದು)
ಪುರುಡೀತ್ –(ಮತ್ಸರಿಸಿ)
ತೆರಿತ್ –(ತಿಳಿದು)

ಕನ್ನಡದ ಅದು ಎಂಬ ಸರ್ವನಾಮದ ಸ್ಥಾನದಲ್ಲಿ, ತುಳುವಿನಲ್ಲಿ ದಕಾರಕ್ಕೆ ಬದಲಾಗಿ 'ಸ್ಟ್' ಬರುತ್ತದೆ:

ಅಸ್ಟೆನ್ – ಅದನ್ನು
ಅಸ್ಟೆಕ್ – ಅದಕ್ಕೆ
ಅಸ್ಟೆಟ್ – ಅದರಲ್ಲಿ

ಕೆಲವು ಸರ್ವನಾಮಗಳಲ್ಲಿ ಪದಾದಿಯಲ್ಲೇ ಬರುತ್ತದೆ:

ಸ್ಟೇನ್ – ನಾನು
ಸ್ಟೀಯ್ – ನೀನು
ಸ್ಟಾಯೆ – ಅವನು
ಸ್ಟಂಬೆ – ಇವನು
ಸ್ಟಂಬುಳ್ – ಇಲ್ಲಿ

ಸ್ವರಾದಿಯಾಗಿರುವ ಸಂಖ್ಯಾವಾಚಕ ಪದಗಳಲ್ಲಿಯೂ 'ಸ್ಟ್' ಇದೆ:

ಸ್ಟೊಂಜಿ – ಒಂದು
ಸ್ಟಿರಡ್ – ಎರಡು
ಸ್ಟೊರಿಯೆ – ಒಬ್ಬ
ಐಸ್ಟೆರೆಕಾಲ – ಐವರಿಗೂ

ಪದಾದಿಯಲ್ಲಿ 'ಸ್ಟ್' ಬರುವ ಇತರ ಕೆಲವು ಉದಾಹರಣೆಗಳು:

ಸ್ಟ್ದ್ದಿ - ಇಲ್ಲ
ಸ್ಟೆಂದ್ - ಎಂದು
ಸ್ಟ್ತ್ತೀರಿ - ಇರಲಿಲ್ಲ
ಸ್ಟ್ತ್ತೆರ್ - ಇದ್ದರು
ಸ್ಟರಿ - ಅಸಾಧ್ಯ

ಪದಾದಿಯಲ್ಲಿ ಸ್ವರವಿರುವ ಕೆಲವು ಸಂಸ್ಕೃತಪದಗಳಲ್ಲಿಯೂ 'ಸ್ಟ' ಕಾಣಿಸಿಕೊಳ್ಳುತ್ತದೆ:

ಸ್ಟರ್ಥೊ - ಅರ್ಥ
ಸ್ಟನುಜೆ - ಅನುಜೆ
ಸ್ಟಶ್ವತ್ಥಾಮಾ - ಅಶ್ವತ್ಥಾಮಾ
ಸ್ಟರ್ಜುನೆ - ಅರ್ಜುನೆ
ಸ್ಟಂಬರೊ - ಅಂಬರೊ

ಕೆಲವೊಮ್ಮೆ ಆದ್ಯಂತಗಳಲ್ಲೂ 'ಸ್ಟ' ಕಾಣಿಸಿಕೊಳ್ಳುತ್ತದೆ:

ಸ್ಟಡ್ಸ್ಟ - ಇಟ್ಟು, ಇರಿಸಿ

ಎರಡು 'ಸ್ಟ'ಗಳು ಜೊತೆಯಾಗಿ ಬಂದ ಉದಾಹರಣೆಗಳೂ ಇವೆ:

ಚೊಸ್ಟಸ್ಟೆ - ಅದನ್ನು ನೋಡಿ
ಅಸ್ಟೆಸ್ಟೂಡ್ಸ್ಟ - ಅದನ್ನು ಕೂಡಿಕೊಂಡು

ಹೀಗೆ ವಿಭಿನ್ನ ಸಂದರ್ಭದಲ್ಲಿ ಕಾಣಿಸಿಕೊಳ್ಳುವ 'ಸ್ಟ' ಎಂಬ ಧ್ವನಿಮಾದ ಬಗ್ಗೆ ವಿಮರ್ಶಿಸುವಾಗ, ಅದೊಂದು ಪದಶೈಲಿಯಾಗಿ ನಮ್ಮ ಪ್ರಾಚೀನ ತುಳುವಿನಲ್ಲಿ ಬಳಕೆಗೊಂಡಂತೆ ಭಾಸವಾಗುತ್ತದೆ.

ಕೆಲವೆಡೆ 'ಸ್ಟ' ಲೋಪವಾದ ಉದಾಹರಣೆಗಳೂ ಇವೆ:

ಪರೊಸ್ಟ -ಎಂಬುದರ ಬದಲು- ಪರೊ (ಹರಸಿ)
ತರ್ಪೊಸ್ಟ - ತರ್ಪೊ (ತರಿಸಿ)
ತೊಡ್ಸ್ಟ - ತೊಡ್ (ತೊಟ್ಟು)

ಕಿವಿಮರೆಯಾದ 'ಸ್ಟ' ಉಚ್ಚಾರ.

'ಸ್ಟ'ಕಾರದ ಸರಿಯಾದ ಉಚ್ಚಾರ ಹೇಗೆ ಎಂಬುದು ಇನ್ನೂ ನಿರ್ಧರಿಸಲಾಗದ ಒಂದು ವಿಷಯವಾಗಿದೆ. ಇದರ ಉಚ್ಚಾರಣೆಗೆ ಸಂಬಂಧಿಸಿದ ಕೆಲವು ಊಹೆಗಳನ್ನು ತುಳು ಭಾಗವತದ ಪ್ರಸ್ತಾವನೆಯಲ್ಲಿ ನೋಡಬಹುದು. (ನೋಡಿ: ಪುಟ ೧೭ರಿಂದ ೩೦)

ಅರುಣಾಬ್ಜನ ಮಹಾಭಾರತದಲ್ಲಿ ಇದು ಯಕಾರ ಪ್ರಾಸಕ್ಕೆ ಪರ್ಯಾಯವಾಗಿ ಬಂದ ಕೆಲವು ಉದಾಹರಣೆಗಳನ್ನು ನೋಡಿದಾಗ, ನಮಗೆ ಇನ್ನೂ ಆಶ್ಚರ್ಯವೆನಿಸುತ್ತದೆ. 'ಯಕಾರ'ದ ಉಚ್ಚಾರಕ್ಕೂ 'ಸ್ಟ'ಕಾರದ ಉಚ್ಚಾರಕ್ಕೂ ಏನಾದರೂ

ಹೋಲಿಕೆಯಿದೆಯೇ? ಹೋಲಿಕೆಯಿಲ್ಲದಿದ್ದರೆ, ಇಲ್ಲಿ ಪ್ರಾಸಭಂಗವಾಗುವುದಿಲ್ಲವೇ? ಇದಕ್ಕೆ ಸರಿಯಾದ ಉತ್ತರ ಇನ್ನೂ ಸಿಕ್ಕಲಿಲ್ಲ. ಇದರ ಬಳಕೆ ಮತ್ತು ಉಚ್ಚಾರ ಸುಮಾರು ಇನ್ನೂರು ವರ್ಷಗಳ ಹಿಂದೆಯೇ ಕಿವಿಮರೆಯಾಗಿರಬೇಕು.

ಅಪೂರ್ವ ಪದಪ್ರಯೋಗಗಳು:

೧. 'ಆಪು' ಎಂಬ ಪದದ ಬಗ್ಗೆ ವಿಷ್ಣುತುಂಗನ ಭಾಗವತದಲ್ಲಿ ವಿವರಣೆ ಕೊಡಲಾಗಿದೆ. (ಪುಟ ೭, ಪದ್ಯ-೨೨ರ ಅಡಿಟಿಪ್ಪಣಿ.) 'ಸ್ಟ್' ಎಂಬುದು ಹಳೆಯ ತುಳುವಿನ ಒಂದು ಪದಶೈಲಿಯಾಗಿ ರೂಢಿಯಲ್ಲಿರುವಂತೆ, 'ಆಪು' ಎಂಬುದು ಹಳೆಯ ತುಳುವಿನ ಒಂದು ವಾಕ್ಯಶೈಲಿಯಾಗಿ ಬಳಕೆಯಲ್ಲಿದೆ. ಹೊಸ ತುಳುವಿನಲ್ಲಿ ಅದು 'ಊಹಾರ್ಥಕ' ಪದವಾಗಿದ್ದರೆ, ಹಳೆಯ ತುಳುವಿನಲ್ಲಿ ಅದು 'ನಿರ್ಧಾರಾರ್ಥಕ' ಪದವಾಗಿದೆ. ಅದು ಆಯಾ ಸಂದರ್ಭದ ಅರ್ಥಕ್ಕೆ ಪುಷ್ಟಿಕೊಡುವ ಪದವಾಗಿದೆ. (ನೋಡಿ: ಮಹಾಭಾರತ: ಸಂಧಿ-೨, ಪಾಡ್-೧೮೫-೧೮೬ ಮತ್ತು ಸಂಧಿ-೫, ಪಾಡ್-೩ ಮತ್ತು ಸಂಧಿ-೩, ಪಾಡ್-೭೭)

೨. 'ಕುಳು' ಎಂಬ ಬಹುವಚನ ಪ್ರತ್ಯಯವಿರುವ ಹೆಚ್ಚಿನ ಕಡೆಗಳಲ್ಲೂ, ಅದನ್ನು 'ಕ್ಳು' ಎಂದು ಓದಬೇಕಾಗುತ್ತದೆ. ಮತ್ತು ಅಲ್ಲಿ ಶಿಥಿಲದ್ವಿತ್ವದ ನಿಯಮ ವನ್ನೂ ಪಾಲಿಸಬೇಕಾಗುತ್ತದೆ. ಇಲ್ಲದಿದ್ದರೆ ಛಂದೋಭಂಗಕ್ಕೂ ಎಡೆಯಾಗುತ್ತದೆ. ಆಧುನಿಕ ತುಳುವಿನಲ್ಲಂತೂ ಅಲ್ಲಿಯ 'ಕ'ಕಾರ ಲೋಪಗೊಂಡ ಉದಾಹರಣೆಗಳೇ ಧಾರಾಳವಾಗಿವೆ. ಬಾಲೆಕುಳು>ಬಾಲೆಳು; ಪಾಪೆಕುಳು>ಪಾಪೆಳು -ಇತ್ಯಾದಿ. ಪ್ರಾರಂಭ ದಲ್ಲಿ 'ಕುಳು' ಇದ್ದದ್ದು ಅನಂತರ 'ಕ್ಳು'ವಾಗಿ ಕ್ರಮೇಣ 'ಳು'ವಾಗಿ ಪರಿವರ್ತನೆ ಗೊಂಡಿರಬೇಕು. ಉದಾ: ಬಾಲೆಳು, ಕಂಜಿಳು -ಇತ್ಯಾದಿ.

೩. ಸಂಧಿಯಲ್ಲಿ 'ಸ್ವರಲೋಪ'ಗಳು: ಸ್ವರದ ಮುಂದೆ ಸ್ವರವು ಬಂದಾಗ ಪೂರ್ವಸ್ವರವು ಲೋಪವಾಗುತ್ತದೆಂಬುದು ಕನ್ನಡ ವ್ಯಾಕರಣದ ನಿಯಮ. ಈ ನಿಯಮ ತುಳುವಿನಲ್ಲೂ ಕೆಲವೆಡೆ ಬಾಧಕವಾಗುತ್ತದೆ. ಆದರೆ ಇನ್ನು ಕೆಲವೆಡೆ ಇದು ಬಾಧಕವಾಗುವುದಿಲ್ಲ.

ಅಂಥಾ ಕಡೆಗಳಲ್ಲಿ ತುಳು ವ್ಯಾಕರಣನಿಯಮವು ಕನ್ನಡ ವ್ಯಾಕರಣನಿಯಮಕ್ಕೆ ವಿರುದ್ಧವಾಗಿ ವರ್ತಿಸುತ್ತದೆ. ಉದಾ: ಬಾಲೆಕುಳು + ಆ್ತ್ತೊ - ಬಾಲೆಕುಳುತ್ತೊ

ಇಲ್ಲಿ ಸ್ವರದ ಮುಂದೆ ಸ್ವರವು ಬಂದಾಗ ಪೂರ್ವಸ್ವರವು ಲೋಪವಾಗುವ ಬದಲು ಉತ್ತರಸ್ವರವು ಲೋಪವಾಗಿದೆ. ಈ ರೀತಿಯ ಉದಾಹರಣೆಗಳು ಆಧುನಿಕ ತುಳುವಿನಲ್ಲೂ ಸಿಗುತ್ತವೆ. ಉದಾ: ಉಣಸ್ಲ+ಇಜ್ಜಿ - ಉಣಸ್ಲಜ್ಜಿ; ಪೈಸೆಲ+ಇಜ್ಜಿ - ಪೈಸೆಲಜ್ಜಿ.

೪. 'ಆವು' ಪ್ರತ್ಯಯದ ಬಳಕೆ:

ಹಳೆಯ ತುಳುವಿನಲ್ಲಿ, 'ರಾಜಾವು' 'ಕರ್ತಾವು' 'ಕನ್ಯಾವು' ಮುಂತಾದ 'ಆವು' ಪ್ರತ್ಯಯಗಳನ್ನೊಳಗೊಂಡ ಹಲವಾರು ಪದಗಳಿವೆ. 'ಆವು' ಪ್ರತ್ಯಯದ ಬಳಕೆ

ಮಲಯಾಳ ಭಾಷೆಯಲ್ಲೂ ಇದೆ. ಬಹುಶಃ ಇದು ದ್ರಾವಿಡ ಭಾಷೆಯ ಒಂದು ಲಕ್ಷಣವಾಗಿ ಬಳಕೆಯಲ್ಲಿ ಬಂದಿರಬೇಕು. ಶಿಷ್ಟ ಸಾಹಿತ್ಯದ 'ಕನ್ಯಾವು' ಪದವೇ ಜನಪದ ಸಾಹಿತ್ಯದ 'ಕನ್ಯಾಪು'ವಾಗಿದೆ.

೫. ಅ್ತ್ -ಎಂಬ ಧಾತು:

ಹಳೆಯ ತುಳುವಿನಲ್ಲಿ 'ಕೊಡು' ಎಂಬರ್ಥದಲ್ಲಿ 'ಅ್ತ್' ಎಂಬ ಧಾತುವಿದೆ. ಈಗ ಅದರ ಬಳಕೆ ಇಲ್ಲ. ಆದರೆ ಮಕ್ಕಳ ಮಾತಿನಲ್ಲಿ (Baby Talk) ಮಾತ್ರ ಉಳಿದಿದೆ. ಮಕ್ಕಳೊಡನೆ ಮಾತಾಡುವಾಗ 'ಎಂಕ್ ಇತ್ತಾ' (=ನನಗೆ ಕೊಡು) ಎಂದು ಈಗಲೂ ಹೇಳುವ ಪದ್ಧತಿಯಿದೆ. ಮಹಾಭಾರತ ಮತ್ತು ವಿಷ್ಣುತುಂಗನ ಭಾಗವತ -ಎರಡರಲ್ಲೂ ಈ ಧಾತುವಿನ ಬಳಕೆಯಿರುವುದನ್ನು ಕಾಣಬಹುದು.

೬. 'ಪುಟ್ಟ್-ಪುಷ್ಟ್' ಧಾತುಗಳು:

ಪ್ರಾಚೀನ ತುಳುವಿನಲ್ಲಿ ಹೆಚ್ಚಿನ ಕಡೆಗಳಲ್ಲಿಯೂ ಪುಟ್ಟ್ ಎಂಬ ಧಾತುವು ಪುಷ್ಟ್ ಎಂಬುದಾಗಿ ರೂಪಾಂತರ ಹೊಂದಿದ್ದನ್ನು ಕಾಣುತ್ತೇವೆ. ಪುಟ್ಟ್‌ಸ್ಟ್ -ಎಂಬುದು ಪುಷ್ಟ್‌ಸ್ಟ್ ಎಂಬ ರೂಪ ಪಡೆಯುತ್ತದೆ.

೭. 'ಬಲ್ಲಾಳ' ಪದಕ್ಕೆ ಅರಸ ಎಂದು ಅರ್ಥ:

ಬಲ್ಲಾಳ ಎಂಬ ಪದವು ಈಗ ಒಂದು ಕುಲನಾಮವಾಗಿ ರೂಢಿಯಲ್ಲಿದ್ದರೂ, ಹಳೆಯ ತುಳುವಿನಲ್ಲಿ ಅದು 'ಅರಸ' ಎಂಬ ಅರ್ಥದಲ್ಲಿಯೇ ಪ್ರಯೋಗಗೊಂಡದ್ದನ್ನು ಕಾಣುತ್ತೇವೆ.

ತೋಲ್ಪೇ ನೃಪ ಕೇಳಪ ಜ್ಯೋತಿಷೆರ್ ಪಂಡ್ತ್ತಿ ಮುಹೂರ್ತೊ
ಏಲ್ಪೇಂದ್ ಪುರೋಹಿತೆ ಪೂರ್ವದಿನೊಂಟ್‌ಡೆ ಪಿಂಪಪ ಭೂಪೆ
ಮಲ್ಲೋದರ ಪೂಜಿತ್ ನಾಂದಿಮುಖೋ ಕೊಟ್‌ಸ್ಟೇ ನಿರೆತ್ತ್ತಿ
ಬಲ್ಲಾಳ್ಳುಳೆ ಪುಂಡ್‌ಟ್ ಡಂಗುರೊಮೀ ಪೊಯಿಪ್ಪೋಸ್ಟೆ ಸಮಸ್ತಾ

(ಸಂಧಿ-೧೧, ಪಾಡ್-೩೧)

[ರಾಜನು ವಿವಾಹಲಗ್ನವನ್ನು ಜೋಯಿಸರಲ್ಲಿ ಕೇಳಿದಾಗ, ಅವರು ಯಾವ ಮುಹೂರ್ತವನ್ನು ಹೇಳಿದರೋ, ಅದೇ ಮುಹೂರ್ತದಲ್ಲಿ ಎಲ್ಲ ವ್ಯವಸ್ಥೆಯನ್ನು ತಾನು ಮಾಡುತ್ತೇನೆಂದು ಪುರೋಹಿತನು ಮೊದಲ ದಿನವೇ ತಿಳಿಸಲು, ಕೂಡಲೇ ರಾಜನು ಗಣಪತಿಯನ್ನು ಪೂಜಿಸಿ, 'ನಾಂದಿಮುಖ' ಎಂಬ ಸಮಾರಂಭವನ್ನು ನಡೆಸಿ, ಅಲ್ಲಿ ನೆರೆದಿರುವ ಅರಸರ ಗುಂಪಿಗೆ ಕೇಳುವಂತೆ ಡಂಗುರ ಹೊಯ್ಸಿದನು].

ಕವಿಯು ಜೀವಿಸಿದ್ದ ಕಾಲದಲ್ಲಿ ನಿಡಂಬೂರು ಮತ್ತು ಚಿಟ್ಪಾಡಿ ಬೀಡುಗಳಲ್ಲಿ ನಿಡಂಬುರಾರ್ ಮತ್ತು ಮೂಡಿಲ್ಲಾರ್ ಮನೆತನದ ಬ್ರಾಹ್ಮಣರು ಅರಸರಾಗಿದ್ದರು. ಅವರನ್ನು ಅರಸರು ಎಂಬ ಅರ್ಥದಲ್ಲಿಯೇ 'ಬಲ್ಲಾಳರು' ಎಂದು ಕರೆಯುತ್ತಿದ್ದರು. ಈಗ ಬಲ್ಲಾಳ ಪದವು ಒಂದು ಕುಲನಾಮವಾಗಿ ಪ್ರಖ್ಯಾತವಾಗಿದೆ. ಈ

ಕುಟುಂಬದವರು ಉಡುಪಿಯ ಅಂಬಲ್ಪಾಡಿಯಲ್ಲಿ ಈಗಲೂ ಇದ್ದಾರೆ. ಹಿಂದೆ ಅವರು 'ಉಡುಪ' ಎಂಬ ಕುಲನಾಮದಿಂದ ಪ್ರಸಿದ್ಧರಾಗಿದ್ದರು. ಅವರ ಬಗ್ಗೆ 'ಹುಟ್ಟು ಉಡುಪರು – ಪಟ್ಟ ಬಲ್ಲಾಳರು' ಎಂಬ ಹೇಳಿಕೆ ಈಗಲೂ ಪ್ರಚಾರದಲ್ಲಿದೆ.[೧೧]

೫. ೮. ನತ್ವ ಮತ್ತು ಮತ್ವಾದೇಶ:

ತುಳುವಿನಲ್ಲಿ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ 'ನತ್ವ' ಮತ್ತು 'ಮತ್ವಾದೇಶ' ಬರುವುದಿದೆ. ಉದಾ:

ಅ್ತ್ತೆನಾ + ಅತಿನಿಷ್ಠುರೆ = ಅ್ತ್ತೆನಾನತಿ ನಿಷ್ಠುರೆ
ಅವನೀಶ + ಆಕುಳೆ = ಅವನೀಶನಾಕುಳೆ
ನಿನೆತ್ೕ + ಅನರಾಗ = ನಿನೆತ್ೕಮನರಾಗ
ಕೇಳುವ್ಹೋ + ಅತಿಭಕ್ತಿಟ್ = ಕೇಳುವ್ಹೋಮತಿ ಭಕ್ತಿಟ್

ಕಾವ್ಯದ ಪೀಠಿಕೆ

ಅರುಣಾಬ್ಜ ಕವಿಯು ತನ್ನ ಕಾವ್ಯವನ್ನು ಅಂಶಗಣ ಷಟ್ಪದಿಯಿಂದಲೇ ಆರಂಭಿಸಿದ್ದಾನೆ. ಪ್ರಾರಂಭದ ಪದ್ಯದ, ಪ್ರಾರಂಭದ ಭಾಗವು ತಾಡವಾಲೆಯಲ್ಲಿ ನಷ್ಟವಾಗಿದೆ. ಅದರ ಕೊನೆಯ ಒಂದಂಶ ಮಾತ್ರ ನಮಗೆ ಲಭಿಸಿದೆ. ಅದು ವಿಘ್ನೇಶನ ಸ್ತುತಿ. ಮುಂದಿನದು ಶಿವಸ್ತುತಿ.

ಮಜಕಂಠಪ್ರಿಯು ಈರೇ-
ಕಜೊವಂತೇನ್ ಸದಾಂತೊ
ಬಜಿಲ್ೕ ಶರ್ಕರೆ ಖರ್ಜೂರೊ ಅರ್ಪಿಪೆನೇನ್
[ಗಜಚರ್ಮಾಂಬರ ಧಾರೀ-
ಭುಜಗಾಭರಣಾ ನಿತ್ಯೊ]
ನಿಜೊಮಾಯಿ ಕವಿತೆಕ್ ವರದೇರಾಲೆ

(ಸಂಧಿ-೧, ಪಾಡ್-೨)

ಇಲ್ಲಿ ದೇವರಿಗೆ ಖರ್ಜೂರವನ್ನು ಅರ್ಪಿಸುವುದು ಇನ್ನೆಲ್ಲೂ ಇರದ ಒಂದು ವಿಶಿಷ್ಟ ಕಲ್ಪನೆಯಾಗಿದೆ. ಮುಂದೆ ಕವಿಯು ಪಾರ್ವತಿ–ಶಾರದೆಯರನ್ನು ಸ್ತುತಿಸುತ್ತಾನೆ. ಶಾರದೆಯನ್ನು ಸ್ತುತಿಸುವಾಗ 'ಭಾರತಾಮೃತೊಮೆನ್ಕೀ । ಸಾರೊಮೆನ್ ರೆಚೀಪರ । ಈರ್ ನೃತ್ತಿಪೊಡೆನ್ನಾ ಮುಖರಂಗಂಟ್' ಎಂದು ಬೇಡಿಕೊಳ್ಳುತ್ತಾನೆ. ಮುಂದಿನ ಎರಡು ಪದ್ಯಗಳಲ್ಲಿ 'ಸರ್ವದೇವತಾಸ್ತುತಿ ಮಾಡಿ, ತನ್ನ ಸೀಮೆಯ ದೈವವಾದ ಕುಡವೂರಿನ 'ಮೃಡರಾಮ'ನ ಪಾದಧೂಳಿಯನ್ನು ತನ್ನ ತಲೆಯಲ್ಲಿ ಮುಡಿದು

---

೧೧. ಹಾಗೆಯೇ ಮೂಡಿಲ್ಲಾರ್ ಎಂಬವರು ಮೂಲತಃ ಕೆದಿಲಾಯರು (ಹೆರ್ಗದವರು) -ಚಿಟ್ಪಾಡಿ ಬೀಡಿನ ಅಧಿಕಾರ ದೊರೆತೊಡನೆ ಅವರೂ 'ಬಲ್ಲಾಳ'ರೆಂದು ಪ್ರಸಿದ್ಧಿ ಪಡೆದರು.

ಕೊಂಡು, ತಾನು ಆರಂಭಿಸಲಿರುವ ಕಾವ್ಯಕ್ಕೆ "ಯಾವುದೇ ಊನ ಬಾರದಂತೆ ರಕ್ಷಿಸಬೇಕು ಸ್ವಾಮಿ" ಎಂದು ಬೇಡಿಕೊಳ್ಳುತ್ತಾನೆ.

ಬಳಿಕ ತನ್ನ ಗುರುವಿನ ಗುರುವೂ ಜಾಣಕವಿಯೂ ಆದ ವಿಣಾಪಾಣಿ ಮುಕುಂದ ನಾಣಿಲ್ತಾಯನನ್ನೂ, ತುಳುವಿನಲ್ಲಿ ರಾಮಾಯಣ ಬರೆದ ಕವಿಗಳನ್ನೂ, ಗುಡ್ಡೆತರಾಯೆ ಎಂಬ ಕವಿಯನ್ನೂ, ಅಂಬರೀಷೋಪಾಖ್ಯಾನ ಬರೆದ ಕವಿಯನ್ನೂ ಸ್ಮರಿಸುತ್ತಾನೆ. ತನ್ನ ಕಾವ್ಯದ ಸಾರವನ್ನರಿಯದೆ ದ್ವೇಷಿಸುವವರು ನಷ್ಟಹೊಂದು ವರೆಂದೂ, ಪ್ರೀತಿಸುವವರು ಸಂತುಷ್ಟರಾಗಿ ಸದ್ಗತಿ ಹೊಂದುವರೆಂದೂ ಹೇಳುತ್ತಾನೆ. ತಾನು ರಚಿಸುವ ಕಾವ್ಯವನ್ನು ಕೇಳಿದವರಿಗೆ ಗಂಗಾಸ್ನಾನವೂ, 'ಸಾರಂಗಪಾಣಿಯುತನ್ ಶ್ರೀರಂಗನ್ ಪೂಜಿಕ್ಣಾತ್' (ಶಿವನಿಂದೊಡಗೂಡಿದ ನಾರಾಯಣನನ್ನು ಪೂಜಿ ಸುವಷ್ಟು) ಫಲವೂ ದೊರೆಯುವುದು –ಎಂದು ಹೇಳಿ ಮತ್ತೊಮ್ಮೆ ತನ್ನ ಸೀಮೆಯ ದೇವರನ್ನು ಸ್ಮರಿಸಿಕೊಳ್ಳುತ್ತಾನೆ. ಮುಂದೆ ಕುಮಾರವ್ಯಾಸನ ಭಾರತದ ಕಥೆ ಆರಂಭವಾದ ಅದೇ ಸನ್ನಿವೇಶದಿಂದಲೇ ಅರುಣಾಬ್ಜನ ಕಾವ್ಯವೂ ಆರಂಭವಾಗುತ್ತದೆ.

ತುಳು ಮಹಾಭಾರತದ ವೈಶಿಷ್ಟ್ಯ:

(ಕ) ತುಳು ಮಹಾಭಾರತದಲ್ಲಿ ವರ್ಣಿತವಾಗಿರುವ ಅನೇಕ ವಿಚಾರಗಳು ಕನ್ನಡ ಮಹಾಭಾರತಕ್ಕಿಂತ ಭಿನ್ನವಾಗಿವೆ. ಕುಮಾರವ್ಯಾಸನು ಸಂಕ್ಷೇಪವಾಗಿ ಹೇಳಿದ ಅನೇಕ ಸಂಗತಿಗಳನ್ನು ಅರುಣಾಬ್ಜನು ವಿಸ್ತಾರವಾಗಿ ಹೇಳಿದ್ದಾನೆ.

ಸರಸಿಜಾಸನ ಕೊಟ್ಟ ಶಾಪದಿ
ಯರಸಿಯಾದಳು ಗಂಗೆ ಬಳಿಕಿ-
ಬ್ಬರಿಗೆ ಮಕ್ಕಳು ವಸುಗಳೆಂಟು ವಸಿಷ್ಠ ಶಾಪದಲಿ
ನಿರಪರಾಧಿಗಳೇಳು ಜನನಾಂ-
ತರಕೆ ಮರಣವ ಕಂಡರುಳಿದಂ-
ಗಿರವು ಭೂಲೋಕದಲಿ ಬಲಿದುದು ಭೀಷ್ಮನಾಮದಲಿ

(ಸಂಧಿ-೨, ಪದ್ಯ-೨೧)

ಈ ಒಂದು ಭಾಮಿನಿಯ ಕತೆಯನ್ನು ಅರುಣಾಬ್ಜನು ಇಪ್ಪತ್ತಾರು ಪದ್ಯಗಳಷ್ಟು ವಿಸ್ತಾರವಾಗಿ ಬರೆದಿದ್ದಾನೆ: (ಸಂಧಿ-೧, ಪಾಡ್-೪೪ ರಿಂದ ೬೯ರ ವರೆಗೆ)

ಇಲ್ಲಿ ಗಂಗೆ ವರುಣರ ಮತ್ತು ಅಷ್ಟವಸುಗಳ ಶಾಪದ ಹಿನ್ನೆಲೆ ಮುನ್ನೆಲೆಗಳನ್ನು ಆತ ವಿವರವಾಗಿ ವರ್ಣಿಸಿದ್ದಾನೆ. ಗಂಗೆಗೆ ಬ್ರಹ್ಮನು ಶಾಪ ಕೊಟ್ಟದ್ದೆಂದು ಕುಮಾರವ್ಯಾಸ ಹೇಳಿದರೆ, ಗಂಗೆಗೆ ಶಿವನು ಶಾಪ ಕೊಟ್ಟದ್ದೆಂದು ಅರುಣಾಬ್ಜ ಹೇಳುತ್ತಾನೆ.

(ಖ) ಮುಂದೆ ವಿಚಿತ್ರವೀರ್ಯಾದಿಗಳು ಮಡಿದ ಅನಂತರ ಯೋಜನಗಂಧಿಯು ಬಂದು ಭೀಷ್ಮನೊಡನೆ –"ಮಗನೆ ರಾಜ್ಯವ ಧರಿಸು, ನೀನಿನ್ನುತ್ತರದ ಹಿಮಕರಕುಲವ ಬೆಳಗು" ಎನ್ನುತ್ತಾಳೆ (ಕನ್ನಡಮಹಾಭಾರತ ಸಂಧಿ–೩, ಪದ್ಯ–೧)

"ಪುತ್ರನಾಣೆನ ಪಣ್ಲೆ ಕೇಳಿಲ ಸಂತತೀ ಸ್ಪದನೆತ್ತ್‌ಟಾ
ಮಿತ್ತ್‌ಕ್ ಗತಿ ಸ್ಪದ್ದಿ ನಾಣಯೆಕೊಂಜಿ ಬುದ್ಧಿ ನಿರೂಪಿಪು
ಕ್ಷತ್ರಿಯೋತ್ತಮ ರಾಜ್ಯ ಪಾಲಿಪಿಲ....."

(ತುಳು ಮಹಾಭಾರತ ಸಂಧಿ–೧, ಪಾಡ್–೯೮)

ಆಗ ಭೀಷ್ಮನು ಹೇಳುತ್ತಾನೆ–

"ತಾಯೆ ನಿಮ್ಮೋಪಾದಿ ರಾಜ್ಯ
ಸ್ತ್ರೀಯಳೆಂದಾ ನುಡಿಯೊಳಗೆ ಗಾಂ–
ಗೇಯ ಮುಳುಗನು ಭೀಷ್ಮವಚನಕೆ ಬೇರೆ ಮೊಳೆಯುಂಟೆ
ಕಾಯಕಲ್ಪಸುಖಕ್ಕೆ ಘನ ನಿ–
ಶ್ರೇಯಸವ ಕೆಡಿಸುವೆನೆ ಯೆಲವದ
ಕಾಯಿಗೋಸುಗ ಕಲ್ಪವೃಕ್ಷವ ಕಡಿವನಲ್ಲೆಂದ

(ಕ. ಮ. ಸಂಧಿ–೩, ಪದ್ಯ–೨)

ಸ್ತ್ರೀಕುಳೆಯ್ಕೆರ್‌ಲೀರೆಕೇ ಸರಿಯೆಂದ್ ಪಂಡಿ ಪ್ರತಿಜ್ಞೆನಿನ್
ನ್‌ಕಡೇ ನೆನ ಜೀವೊ ಪೋನೆಕೆ, ದೇಹೊಂತಲ್ಪಸುಖೊಂಕ್ಕೆಗ್
ಜಾಕ್ ತಪ್ಪವಳೋಡು ಪುಣ್ಯೊಮಿ, ಕಲ್ಪಕೋ ಕಡ್‌ಪುಪ್ಪಿರಿ
ಚೂರ್ಕ್‌ನ್ಯೆಕಿಲವೊಂತ ಕಾಯಿತ ಸ್ವಾದುಕೆಂದೆರ್ ಭೀಷ್ಮೆರ್

(ತು. ಮ. ಸಂಧಿ–೧, ಪಾಡ್–೯೯)

[ಸ್ತ್ರೀಯರೆಲ್ಲರೂ ನಿಮಗೆ ಸಮಾನರು ಎಂದು ನಾನು ಹೇಳಿದ ಪ್ರತಿಜ್ಞೆಯಿಂದಾಚೆಗೆ, ನನ್ನ ಜೀವ ಹೋಗುವ ತನಕವೂ, ನನ್ನನ್ನು ನೂಕದಿರಿ. ನಾನು ಆರ್ಜಿಸಿದ ಪುಣ್ಯವನ್ನು, ದೇಹದ ಅಲ್ಪಸುಖಗಳಿಗಾಗಿ ಯಾಕೆ ಕಳಕೊಳ್ಳಬೇಕು. ಎಲವದ ಕಾಯಿಯ ರುಚಿಗಾಗಿ, ಕಲ್ಪವೃಕ್ಷವನ್ನು ಕಡಿಯಲಾರೆ.]

ಮೇಲಿನ ಪದ್ಯದಲ್ಲಿ ಅರುಣಾಬ್ಜನು ಕುಮಾರವ್ಯಾಸನನ್ನು ನೇರವಾಗಿ ಅನುಸರಿಸಿದ್ದಾನೆ.

(ಗ) ಕುಂತೀಭೋಜನಿಗೆ ಕುಂತಿಯು ಹುಟ್ಟಿ ಬೆಳೆದ ವಿಚಾರವನ್ನೆಲ್ಲ ಕುಮಾರವ್ಯಾಸನು ಒಂದೇ ಭಾಮಿನಿಯಲ್ಲಿ ಮುಗಿಸಿದರೆ (ಸಂಧಿ–೩, ಪದ್ಯ–೧೩) ಅರುಣಾಬ್ಜನು ಆ ಕತೆಯನ್ನು ಆರು ಪದ್ಯಗಳಲ್ಲಿ ವಿವರಿಸಿದ್ದಾನೆ.

ಕುಂತಿ ಹುಟ್ಟಿದೊಡನೆ ಕುಂತೀಭೋಜನು ಜೋಯಿಸರನ್ನು ಕರೆಸಿ, ಆಕೆಯ ಜಾತಕಫಲವನ್ನು ಕೇಳಿ ತಿಳಿದುಕೊಳ್ಳುತ್ತಾನೆ. ಬಂದವರಿಗೆಲ್ಲ ದಾನದಕ್ಷಿಣೆಗಳನ್ನು ಕೊಡುತ್ತಾನೆ. ಆಕೆ ಬೆಳೆದು ದೊಡ್ಡವಳಾಗುತ್ತಾಳೆ:

ಯೇರ್‌ಯೋ ಶುಭಲಕ್ಷಣೊಂಕುಳು ಕಾಂತಿಯಾವೊಮು ಭಾವೊಮಾ
ಆರ್‌ಯೋ ಮಿರೆಯಂದೊವೇರ್‌ಸ್ಪಿ ಹೇಮಕುಂಭ ಸಮಾನೊಮೆ
ಮೀರ್‌ಯೋ ತನುಕಾಂತಿ ಕೇಶೊಮು ಪ್ರಾಯೊ ಷೋಡಶೊಮಾವಪ
ಆರೆಯೋ ನೃಪೆ ಪುತ್ರಿನೇರೆಕ್ ಕೊಳ್ಕ್‌ಣಾಂದ್, ಮನಂತುಳೈ

ಇತ್ಯಾದಿ ಸಹಜ ವರ್ಣನೆಗಳು ಈ ಭಾಗದಲ್ಲಿ (ಸಂಧಿ-೧, ಪಾಡ್-೧೧೭) ಮೂಡಿಬಂದಿವೆ.

ಹೀಗೆ ಕುಮಾರವ್ಯಾಸಭಾರತವನ್ನೂ, ಅರುಣಾಬ್ಜನ ಭಾರತವನ್ನೂ ತುಲನೆಮಾಡಿ ನೋಡಿದಾಗ, ಹೆಚ್ಚಿನ ಕಡೆಗಳಲ್ಲೂ ಅರುಣಾಬ್ಜನು ತನ್ನ ಸ್ವಂತಿಕೆಯನ್ನೇ ಮೆರೆದ ಉದಾಹರಣೆಗಳು ಸಿಗುತ್ತವೆ.

ಕುಮಾರವ್ಯಾಸನಿಂದಲೇ ಸ್ಫೂರ್ತಿ ಪಡೆದು, ಆತನು ಹೇಳಿದ್ದಕ್ಕಿಂತ ಭಿನ್ನವಾಗಿ ವರ್ಣನೆಗಳನ್ನು ಹಣೆಯುವ ಜಾಣ್ಮೆ ಅರುಣಾಬ್ಜನಿಗೆ ಇದೆ.

ಅಧಿರಥನಿಗೆ ಗಂಗಾತಟದಲ್ಲಿ ಸಿಕ್ಕಿದ ಮಗು(ಕರ್ಣ)ವನ್ನು ಕುಮಾರವ್ಯಾಸ ಹೀಗೆ ವರ್ಣಿಸುತ್ತಾನೆ:

ಹೊಳೆಹೊಳೆದು ಹೊಡಮರಳಿ ನಡು ಹೊ-
ಸ್ತಿಲಲಿ ಮಂಡಿಸಿ ಬೀದಿ ಬೀದಿಗ-
ಳೊಳಗೆ ಸುಳಿವರ ಸನ್ನೆಯಲಿ ಕರೆಕರೆದು ನಸುನಗುತ
ಲಲಿತ ರತ್ನದ ಬಾಲದೊಡಿಗೆಯ
ಕಳಚಿ ಹಾಯ್ಕುವ ಹೆಸರು ಜಗದಲಿ
ಬೆಳೆವುತಿರ್ದುದು ಹಬ್ಬಿದುದು ಜನಜನದ ಕರ್ಣದಲಿ

(ಸಂಧಿ-೩, ಪದ್ಯ-೨೭)

ಅರುಣಾಬ್ಜನ ವರ್ಣನೆ ಹೀಗಿದೆ:

ಲೋಕೇರೇ ಮುಖೊ ಚೂವಪಾ ತೆಳಿತೌಟ್ಟ್ ನ್ಯಾಳ್ವೆ ಕೈಕುಳೆ
ಆಕರಾಕರ ನೂಕುವೇ ತನ ದೇಹೊಮಿನ್ ಕಬುತೋಲುವೆ
ಬಾಕಿತಾಡೆಕ್ ನೂಕುವೇ ತಡಿಯೆಚ್ಚಿಟ್ ಕರೊಮೂಂದುವೇ
ಪೋಕ್‌ಕುತ್ಸಹಿತೌಟ್ಟ್‌ಲಾ ಪಿದೆಯಿಪ್ಪ ಬಾಲಶಿಖಾಮಣಿ

(ಸಂಧಿ-೧, ಪಾಡ್-೧೩೬)

ಹಾಗಾಗಿ ಅರುಣಾಬ್ಜನು ಕೇವಲ ಒಬ್ಬ ಅನುವಾದಕ ಕವಿಯಲ್ಲ; ಆತ ಸೃಜನಶೀಲ ಕವಿ. ವಿಷ್ಣುತುಂಗನು ಕನ್ನಡಭಾಗವತವನ್ನು ಹಲವೆಡೆ ನೇರವಾಗಿ

ಅನುವಾದಿಸಿದ ಉದಾಹರಣೆಗಳು ಸಿಗುತ್ತವೆ. ಆದರೆ ಅರುಣಾಬ್ಜನಿಗೆ ಆ ರೀತಿಯ ಅನುಸರಣೆ ಇಷ್ಟವಿಲ್ಲ. ಅವನಿಗೆ ಕುಮಾರವ್ಯಾಸ ಒಬ್ಬ ಮಾರ್ಗದರ್ಶಕ ಗುರು ಮಾತ್ರ. ಆ ಗುರುವು ತೋರಿದ ಮಾರ್ಗದಲ್ಲಿ ಆತ ತನ್ನ ಕಾಲುಗಳಲ್ಲೇ ನಡೆದಿದ್ದಾನೆ.

(ಜ) ಕುಂತಿ-ಮಾದ್ರಿಯರೊಂದಿಗೆ ದಾಂಪತ್ಯಸುಖವನ್ನು ಅನುಭವಿಸುತ್ತಿರುವ ಪಾಂಡುಭೂಪತಿಗೆ ಅರುಣಾಬ್ಜನು ಕೊಟ್ಟ ಹೋಲಿಕೆ ತುಂಬ ಚೆನ್ನಾಗಿದೆ. ಎರಡೆರಡು ಹೆಂಡತಿಯರನ್ನು ಕಟ್ಟಿಕೊಂಡವರನ್ನೇ ಆತ ಹೋಲಿಕೆ ಕೊಟ್ಟಿದ್ದಾನೆ:

ಆ ಹರೀ ರ್‌ಮೆ ಞ ಧರಿತ್ರಿನಾಂದ್‌ತ್ತೆರಾಕುಳು, ಶಂಕರನ್
ದೇಹೊಮೀ ತೆರಿತೊಂಡಿ ಗೌರಿನ ಗಂಗೆನಂದೊಮು ಚೂವುಟ,
ಸಾಹಸಂಟ್ ಸವಿತ್ರಿನಾ ಉಷೆನಂದೊಮಾ ನೃಪಸಿಂಹಟ
ಸ್ನೇಹಿತ್ ಅನುಕೂಲೆರಾಸ್ಪವುಟ್‌ತ್ತೆರ್ ಕುಂತಿಯ ಮಾದ್ರಿಯ ॥

(ಮಹಾವಿಷ್ಣುವಿಗೆ ಶ್ರೀದೇವಿ-ಭೂದೇವಿಯರಿದ್ದಂತೆ, ಶಿವನಿಗೆ ಗೌರಿ-ಗಂಗೆಯರಿದ್ದಂತೆ, ಸೂರ್ಯನಿಗೆ ಸಾವಿತ್ರಿ-ಉಷೆಯರಿದ್ದಂತೆ, ಪಾಂಡುವಿಗೆ ಕುಂತೀ-ಮಾದ್ರಿಯರು ಅನುಕೂಲವಾಗಿದ್ದರು.)

ಈ ವರ್ಣನೆ ಕುಮಾರವ್ಯಾಸಭಾರತದಲ್ಲಿಲ್ಲ. ಇದು ಅರುಣಾಬ್ಜನದ್ದೇ ಸ್ವಂತ ಕಲ್ಪನೆ. ಮುಂದೆ ಪಾಂಡು ಚಕ್ರವರ್ತಿ ಮಾದ್ರಿಯನ್ನು ಆಕೆ ಬೇಡವೆಂದರೂ ಬಲಾತ್ಕರಿಸಿದ ಘಟನೆಯನ್ನು ಅರುಣಾಬ್ಜ ಹೀಗೆ ವರ್ಣಿಸುತ್ತಾನೆ:

ಪಿಲಿಟಾ ತಾಗ್‌ಸ್ಪ್ ಪೆತ್ತ
ಬಲಸೇರಾಕ್‌ಣಲುಂಡೋ
ಎಲಿಕುಳೂ ಮರಿಕುಳೆ ಗೇಲ್‌ಕ್‌ಣುಂಡೋ
ಫಲುಗಜೊಂಕುಳು ಸಿಂಹ
ನಿಲೆ ತಪ್ಪೊರ್‌ಕ್‌ಣಾಂದುಂಡೊ
ಯೆಲೆ ಭೂಪಾ ಸತಿಕುಳು ಗೆಲ್ಪೆರೊ ಭರ್ತಾವಿ

(ಹುಲಿಯನ್ನೆದುರಿಸಿ ದನವೂ, ಹಾವನ್ನೆದುರಿಸಿ ಇಲಿಗಳೂ, ಸಿಂಹವನ್ನೆದುರಿಸಿ ಆನೆಯೂ ಜೈಸಲುಂಟೆ? ಹಾಗೆಯೇ ಗಂಡನನ್ನೆದುರಿಸಿ ಹೆಂಡತಿಯರು ಗೆಲ್ಲಬಲ್ಲರೆ?)

(ಚ) ಹಸ್ತಿನಾವತಿಯಲ್ಲಿ ಹುಡುಗರಾಗಿ ಬೆಳೆಯುತ್ತಿದ್ದ ಕೌರವ-ಪಾಂಡವರು ಆಡುತ್ತಿದ್ದ ಆಟಗಳನ್ನು ವರ್ಣಿಸುವಾಗ ಕುಮಾರವ್ಯಾಸನು ಕನ್ನಡನಾಡಿನಲ್ಲಿ ರೂಢಿಯಲ್ಲಿದ್ದ ಆಟಗಳನ್ನು ಆಯ್ದುಕೊಂಡರೆ, ಅರುಣಾಬ್ಜನು ತುಳುನಾಡಿನಲ್ಲಿ ರೂಢಿಯಲ್ಲಿದ್ದ ಆಟಗಳನ್ನು ಆಯ್ದುಕೊಳ್ಳುತ್ತಾನೆ.

"......ಆಳಿನೇರಿಕೆ ಹಿಡಿಗವಡೆ ಗುರಿ-
ಯಾಳು ಚೆಂಡಿನ ಹೊಣಕೆ ಚಿಣಿಕೋ
ಲಾಳು ಗೊತ್ತಿನ ದಂಡೆಯೆನೆ ನಾನಾ ವಿನೋದದಲಿ

ಗುಡುಗು ಗುತ್ತಿನ ಚೆಂಡು ಗುಮ್ಮನ
ಬಡಿವ ಕತ್ತಲೆ ಗುದ್ದುಗಂಬದ
ಗಡಣೆ ಕಣ್ಮುಚ್ಚಸಗವರಿ ಹರಿಹಲಗೆ ನಿಡುಗವಣೆ ।
ಕೆಡಹು ಕುಟ್ಟಿಗನಾದಿಯಾದವ
ಗಡ ವಿನೋದದಲಾಡಿದರು ಪಂ-
ಗಡದಲೈವರು ನೂರ್ವರಿವರಿತ್ತಂಡವೊಂದಾಗಿ *(ಕು.ಭಾಃ ಸಂಧಿ-೬, ಪದ್ಯ-೧೨)*

ಗ್‌ಡಿಯೆ ಬದ್ದೆಯ ಕಂಬೊಂ-
ತ್‌ಡೆ ಕೋಟೆ ಕಣ್ಮುರ್ಚಿಲ್
ಗ್‌ಡೆಕಪ್ಷ್ ನಲಿಪುಕೀ x xಡ ಶೆಂಡ್
ಖಡುಕೈಟ್ ಮರಿಯಾಟಂ-
ಟ್‌ಡೆಪ್ಪೋ ಬುಬ್ಬುಕಿ ಪಲ್ಲಿ
ಪುಡವೀಃಶಾತ್ಮಜೆರೇ ಲೀಲೆಕುಳುಂಬೆಯ್ಯಾ
ಒಂಜಿ ಮುಂಡ್‌ಣೆಯಾಡ್‌ಸ್ಟ್
ಪಂಜಿ ಕುಂಬುಟೆ ಪಲ್ಲಿ
ಶಂಜೆ ಕರ್ತ್ಲೆ ಗ್‌ದ್ದ್‌ಳೆನಿಕೀ ನಾನಾ
ರಂಜಕೊಂಕುಳೆಟೆಯ್ಯಾ
ಸ್ಪೊಂಜಾಸ್ಟ್ ನಲಿತ್ತ್ತೆರ್
ವೆಂಜೀಪ್ಪೋಯೆನ ಭೀಮೆ ತನ ಶೌರ್ಯೊಂಟ್
(ಸಂಧಿ-೨, ಪಾಡ್-೧೩೮, ೧೩೯)

ಇವುಗಳಲ್ಲಿ ಕಂಬಾಟ, ಕಣ್ಣುಮುಚ್ಚಾಲೆಯಾಟ, ಪಲ್ಲಿ (ಮುಷ್ಟಿ) ಬಿಡಿಸುವಾಟ –ಮುಂತಾದ ಕೆಲವು ಆಟಗಳು ಮಾತ್ರ ಈಗ ರೂಢಿಯಲ್ಲಿವೆ. ನೂರಾರು ವರ್ಷಗಳ ಹಿಂದೆ ತುಳುನಾಡಿನ ಮಕ್ಕಳು ಆಡುತ್ತಿದ್ದ ಇತರ ಆಟಗಳೆಲ್ಲ ಮರೆತೇ ಹೋಗಿವೆಯೆನ್ನಬಹುದು.

(ಛ) ಹಿಂದೆ ಬಾಹಟ ಎಂಬ ವೈದ್ಯಗ್ರಂಥವು ತುಳುನಾಡಿನಲ್ಲಿ ಬಹಳ ಪ್ರಚಾರದಲ್ಲಿತ್ತೆಂದು ಕಾಣುತ್ತದೆ. ಕೌರವ-ಪಾಂಡವರು ವಿದ್ಯಾಭ್ಯಾಸ ಮಾಡುವಾಗ ಪುರಾಣ, ಜ್ಯೋತಿಷಗ್ರಂಥಗಳೊಂದಿಗೆ 'ಬಾಹಟ'ವೆಂಬ ವೈದ್ಯಶಾಸ್ತ್ರವನ್ನು ಅವರು (ಕೃಪಾಚಾರ್ಯರಿಂದ) ಕಲಿತರು ಎಂದು ವರ್ಣಿಸುತ್ತಾನೆ ಅರುಣಾಬ್ಜ. (ಸಂಧಿ-೨, ಪಾಡ್-೧೬೬)

(ಜ) ದ್ರೋಣನು ಸಹಾಯವನ್ನಪೇಕ್ಷಿಸಿ, ದ್ರುಪದನ ಬಳಿಗೆ ಹೋದಾಗ, ಆತ "ಪೆಜಿಸ್ಟೇ ತಿರಿಯುಣ್ಕೇ ಅವನೀಸುರಕ್ ಧರಣೀಶೆರೆಟ ಏವುಳೆನಾ ಸಖ್ಯತೆನಾ" ಎಂದು ಹಂಗಿಸುತ್ತಾನೆ. ಆಗ ದ್ರೋಣನು–

"ಮನುಜಾಧಿಪ ಕೇಳಿನ ರಾಜ್ಯೊಮಿನಾ ಧೂಳೀಪಟೊ ಮಾಂತ್
ಯೆನ ಶಿಷ್ಯೆರೆ ಕೊಂಡಿನಿ ಕಟ್ಟೊಸ್ಟ್ತ್ ಪಿದೆಂಗೈಪ್ಪಡ್‌ಪೋಸ್ಟ್
ಜನೊಮೆಯ್ಯ್‌ಡೆಪಿನ್ನಿ ಪ್ರಕಾರೊಮೆನಾ ವಾಮಾಂಫ್ರಿಟ್ ಮೊಷ್ಸ್ಟ್
ಯೆನ ಕೋಪೊಮಿ ತೀರ್ಪನತೆಪ್ಪುಟ್‌ಂಬು ಮಿರೆಮೀಶಕುಳಾತ್

(ಸಂಧಿ-೨, ಪದ್ಯ-೧೮೪)

ಎಂದು ಪ್ರತಿಜ್ಞೆ ಮಾಡುತ್ತಾನೆ. ದ್ರೋಣನ ಮಾತುಗಳಲ್ಲಿ ಕೋಪ, ಛಲ ಮತ್ತು ದ್ರುಪದನ ಬಗೆಗಿನ ತಿರಸ್ಕಾರ -ಇವು ಮೂರೂ ಮುಪ್ಪುರಿಯಾಗಿರುವಂತೆ ಭಾಸವಾಗುತ್ತದೆ. ಇಲ್ಲಿ ತನಗೆ ಬೇಕಾದ ಶಬ್ದಗಳನ್ನು ಬೇಕಾದಂತೆ ದುಡಿಸುವಲ್ಲಿ ಅರುಣಾಬ್ಜನು ಸಫಲನಾಗಿದ್ದಾನೆ.

(ಝ) ಅರುಣಾಬ್ಜನ ಕಾವ್ಯದಲ್ಲಿ ವಿವಿಧ ವಾದ್ಯಗಳ ವರ್ಣನೆ ಬರುತ್ತದೆ. ಗಾಂಧಾರಿಯು ಗಜಪೂಜೆಗೆ ಸಿದ್ಧಳಾಗಿ ಬರುವಾಗ ಧ್ವನಿಸಿದ ವಾದ್ಯಗಳ ವಿವರ ಹೀಗಿದೆ:

ಉಡುಡಕ್ಕೆಯುಡುಕ್ಕೆಯ ದಕ್ಕೆಕುಳಾ ಪಟಹಂ ಪಟುಭೇರಿ
ನ್‌ಡ್‌ವಾದ್ಯೊಮು ಕೈಮಣಿ ತಾಳರವೊಮಿರೆತಾಳೊಮನೇಕೊ
ನಡತ್ ಕರಿರಾಜ ಸಮೀಪಪದಂಟಾಸ್ಸೀ ಸಮಯಂಟ್
ಉಡುರಾಜನಿಭಾನನೆ ದಂಡ್ಯೆಟ್‌ತ್ತ್ ಲ್‌ಜತಳ್ ತೆಳಿತಂಚ

ಇಲ್ಲಿ ಕವಿಯು ಜೀವಿಸಿದ್ದ ಕಾಲದಲ್ಲಿ ತುಳುನಾಡಿನಲ್ಲ ಪರಿಚಿತವಾಗಿದ್ದ ವಾದ್ಯಗಳ ವರ್ಣನೆಯಿದೆ:

ಉಡುಡಕ್ಕೆ – ಉಡುವಿನ ಚರ್ಮದಿಂದ ಮಾಡಿದ ಡಕ್ಕೆ, ಉಡುಕ್ಕೆ – ಮಲೆಯಾಳದಲ್ಲಿ ಇದನ್ನು 'ಎಡಕ್ಕ' ಎನ್ನುತ್ತಾರೆ. ದಕ್ಕೆ – ತುಳುನಾಡಿನ ದಕ್ಕೆಬಲಿಗೆ ಬಾರಿಸುವ ವಾದ್ಯ, ಪಟಹ, ಪಟುಭೇರಿ – ದೊಡ್ಡ ಭೇರಿ (ತುಳುನಾಡಿನ ಅತಿ ದೊಡ್ಡ ಭೇರಿ ಬಪ್ಪನಾಡು ದೇವಸ್ಥಾನದಲ್ಲಿದೆ), ನ್‌ಡ್‌ವಾದ್ಯೊ – ನಾಗಸ್ವರ, ಕೈಮಣಿ – ಕಂಚಿನ ಚಿಕ್ಕ ತಾಳ, ಇರೆತಾಳ – ಕಂಚಿನ ದೊಡ್ಡ ತಾಳ (ಯಕ್ಷಗಾನದಲ್ಲಿ ಬಾರಿಸುವ ಚಕ್ರತಾಳ).

ಇಂಥದೇ ಒಂದು ವಾದ್ಯಸಮ್ಮೇಳನದ ವಿವರವು ದ್ರೌಪದೀಸ್ವಯಂವರದ ಸಂದರ್ಭದಲ್ಲೂ ಬರುತ್ತದೆ. ಅಲ್ಲಿ ಇನ್ನೂ ಕೆಲವು ಅಪೂರ್ವ ವಾದ್ಯಗಳ ಹೆಸರುಗಳಿವೆ:

ಕಡುವೈ ದುಡಿ ಮದ್ದಳಿ ಭೇರಿಕುಳೆಡ್ಡೆಡ್ಡಾರೆ ಮೃದಂಗೊ
ಪಡಡಕ್ಕೆ ಕರಂಡೆಯು ಚೌಂಡಕೆಯಾ ಪಟಹೋ ತಿಮಿಲ್ಯೆಂದಾ
ಪಡೆಯುರ್ಬುಕಿ ಚಂಬಟೊ ಚೆಂಬಕರೊ ನೆಸಳಾದಿ ಸುವಾದ್ಯಂ
ಕಡಲೇಳ್‌ಲ ನಾದಿಪ ಘೋರ್ಣಿಪಸ್ಟ್ ಮಗ್‌ಟ್‌ಪ್ಪುಣಸಂಖ್ಯೊ

(ಸಂಧಿ-೧೧, ಪಾಡ್-೩)

ಇಲ್ಲಿ ತುಳುನಾಡಿನ ಪ್ರಸಿದ್ಧ ಜನಪದ ವಾದ್ಯವಾದ ದುಡಿಯಿದೆ. ಯಕ್ಷಗಾನದ ಮದ್ದಳೆಯಿದೆ. ದೇವಸ್ಥಾನದ ಭೇರಿಗಳಿವೆ. ಸಂಗೀತದ ಮೃದಂಗವಿದೆ. ಪಂಚವಾದ್ಯಕ್ಕೆ ಸಂಬಂಧಿಸಿದ ಪಟಹ ತಿಮಿಲೆಗಳಿವೆ. ರಣವಾದ್ಯವಾದ ಚಂಬಟೊ (ತಮ್ಮಟೆ) ಇದೆ. ಚೆಂಬಕರೊ–ನೆಸಳೆ –ಅಂದರೆ ಚೆಂಬಿನ ಪಾತ್ರೆ ಮತ್ತು ಮಣ್ಣಿನ ಪಾತ್ರೆಗಳು (ಇವೆರಡರ ನಾದವೂ ಬೇರೆ ಬೇರೆಯಾಗಿವೆ. ಒಂದು ತಾರಸ್ಥಾಯಿಯೂ ಇನ್ನೊಂದು ಮಂದ್ರಸ್ಥಾಯಿಯೂ ಆಗಿರುವುದರಿಂದ ಇವುಗಳ ಜೊತೆ ನುಡಿತ ತುಂಬ ಆಕರ್ಷಕವೆನಿಸಬಹುದು). ಪಡಡಕ್ಕೆ (ಪದೆಡಕ್ಕೆ : A Kettle Drum –ಕಿಟ್ಟೆಲ್) –ನಗಾರಿಯಂಥಾ ವಾದ್ಯ[೧೨] ಕರಂಡೆ(ಕರಡೆಯೆಂಬ ವಾದ್ಯ). ಚೌಂಡಕೆ(ಚೌಡಿಕೆಯೆಂಬ ವಾದ್ಯ)ಗಳಿವೆ. ಕಡುವ್ಯೆ ಎಂಬ ವಾದ್ಯ ಯಾವುದೆಂದು ತಿಳಿಯುವುದಿಲ್ಲ. ಎಡ್ಡೆಡ್ಡಾರೆ ಎಂಬುದು ವಿಶೇಷಣ ಪದವೇ ಅಥವಾ ಒಂದು ವಾದ್ಯದ ಹೆಸರೇ –ಎಂಬುದೂ ಗೊತ್ತಾಗುವುದಿಲ್ಲ.

'ಐರಾವತ' –ಕಥೆಯಲ್ಲಿ ಭೀಷ್ಮ ದ್ರೋಣ ವಿದುರರು ಐರಾವತದ ಬಳಿ ಬಂದು ನಮಸ್ಕರಿಸಿ, ಅಕ್ಷತೆಕಾಳು ಹಾಕಿ ಅರ್ಚಿಸುವಾಗ 'ದುಡಿ ಮದ್ದಳಿ ಭೇರಿ ಪದೆ ಮುಟಿಸ್ ಪಟಹ' ಮುಂತಾದ ವಾದ್ಯಗಳು ಬ್ರಹ್ಮಾಂಡವೇ ನಡುಗುವಂತೆ ಧ್ವನಿಸಿದುವಂತೆ (ಸಂಧಿ–೫, ಪಾಡ್–೯೭). ಇಲ್ಲಿ 'ಪದೆ' ಎಂದರೆ ಈಗಾಗಲೇ ಪ್ರಸ್ತಾವಿಸಿದ ಪದೆಡಕ್ಕೆ (ಪಡಡಕ್ಕೆ) ಎಂಬ ವಾದ್ಯವೆನ್ನಬಹುದು. ಆದರೆ 'ಮುಟಿಸ್' ಎಂಬ ವಾದ್ಯ ಯಾವುದೆಂದು ತಿಳಿಯುವುದಿಲ್ಲ.

(ಇ) ವಿವಾಹಮಂಟಪದಲ್ಲಿ ಅತಿಥಿಗಳ ಮನೋರಂಜನೆಗಾಗಿ ಜರಗುತ್ತಿದ್ದ ಕಲಾಕಾರ್ಯಕ್ರಮಗಳಲ್ಲೂ ವಾದ್ಯಗಳ ಪಾಲುಗಾರಿಕೆಯಿದೆ:

ತಾಳೋ ಪುಟಿಲ್ ಕೈಮಣಿ ವೀಣೆ ದುಡೀ ಪದೆಢಕ್ಕೆಯುಡುಕ್ಕೆ
ಕಾಳೇ ವರಮದ್ದಳಿ ಗೋಮುಖೊಮಾಂದಿತ್ಯಾದಿ ಸುವಾದ್ಯೊ
ಮೇಳೈಪೊಸ್ಟ್ ನೃತ್ತಸುಗಾಯಕೆರಾ ನಟರೇರ್ಕುಳನೇಕೊ
ಘೋಳೆಂದುಳೆಯಾಸ್ಟ್ಂಣ್ ಪಂದೆಲ್ಟ್ ಪರವೋತ್ಸಹೊ ಚೂವೆರಾ

(ಸಂಧಿ–೧೧, ಪಾಡ್–೨೧)

ಚಿಟಿಕೆ ತಾಳ, ಕೊಳಲು, ಸಣ್ಣ ಕಂಚಿನ ತಾಳ, ವೀಣೆ, ದುಡಿ, ಪದೆಡಕ್ಕೆ (Kettle Drum), ಉಡುಕ್ಕೆ, ಕಹಳೆ, ಮದ್ದಳೆ, ಗೋಮುಖ –ಎಂಬಿತ್ಯಾದಿ ವಾದ್ಯಗಳ ಮೇಳಕ್ಕೆ ಸರಿಯಾಗಿ, ಗಾಯಕರು ನರ್ತಕರು ಮತ್ತು ನಾಟ್ಯಕಾರರು ಮದುವೆಯ ಚಪ್ಪರದೊಳಗೆ ತಮ್ಮ ಕಲಾ ಪ್ರದರ್ಶನ ನಡೆಸುತ್ತಿದ್ದರಂತೆ.

---

೧೨. ತುಳುಭಾಗವತದಲ್ಲಿ ಪದೆ ಮತ್ತು ಡಕ್ಕೆಗಳು ಬೇರೆ ಬೇರೆ ಪದಗಳಿರಬಹುದು ಎಂದು ಭಾವಿಸಿ ಕೊಟ್ಟಿರುವ ಅರ್ಥವು ತಪ್ಪಾಗಿದೆ.

ಹೀಗೆ ಸುಮಾರು ೨೬ ವಾದ್ಯಗಳ ವಿವರ ಅರುಣಾಬ್ಜನ ಕಾವ್ಯದಲ್ಲಿ ಸಿಗುತ್ತದೆ. ಸಂಸ್ಕೃತ ಮಹಾಭಾರತ ಮತ್ತು ಕನ್ನಡ ಮಹಾಭಾರತದಲ್ಲಿ ಇಷ್ಟು ವಾದ್ಯ ವೈಭವಗಳಿಲ್ಲ. ತುಳುವರು ಎಂಥ ಕಲಾರಸಿಕರಾಗಿದ್ದರು ಎಂಬುದು ಈ ವರ್ಣನೆಗಳಿಂದ ವ್ಯಕ್ತವಾಗುತ್ತದೆ.

(ಟ) ಮದುವೆಗೆ ಬಂದವರಿಗೆ ಕುಡಿಯಲು ಹಿಮಾಂಬು(Ice Water)ವಿನ ವ್ಯವಸ್ಥೆ:

ಕೂಪೊಂಕುಳೆ ತೋಡ್‌ಸ್ಟ್ ಕಟ್ಟವೆಕ್ ಸುತೆ ಪೂಜಿಸ್ಟ್ ನಿಂಜ
ಪೊಯ್ಯೋಸ್ಟ್ ಹಿಮಾಂಬುಡ್‌ಪೋಸ್ಟ್ ಪಣೀ ಉಳ್ಳೆ ಪೋಯಿ ಜನೊಂಕ್
ಚೂಪೋಯೆರ್ ನೀರ ಪ್ರಕಾರೊಮಿನೀ ಕೋಳಿಯೆರ ಕಡೆಕೂಡ
ಜಾಪಣ್ಣೊ ಸ್ವಯಂವರ ಸಂಭ್ರವೊಮೀ ಪಾಂಚಾಲೆ ಸೃಜೀತೀ

(ಸಂಧಿ-೧೧, ಪಾಡ್-೨೩)

(ಬಾವಿಗಳನ್ನು ತೋಡಿಸಿ, ಅದರ ಒಳಗಿನ ಕಟ್ಟಣ(ಅಂಕಣ)ಕ್ಕೆ ಸುಣ್ಣವನ್ನು ಲೇಪಿಸಿ, ಅದಕ್ಕೆ ಹಿಮಜಲವನ್ನು ಹೊಯ್ದು, ಪನ್ನೀರು ಹಾಕಿಸಿ, ವಿವಾಹಶಾಲೆಯ ಒಳಗೆ ಹೋದ ಜನರಿಗೆ ಆ ನೀರಿನ ವೈಶಿಷ್ಟ್ಯವನ್ನು ತಿಳಿಸಿ, ಬೇಕೆಂದವರಿಗೆ ಬೇಕಾದಷ್ಟು ಅದನ್ನು ವಿತರಣೆ ಮಾಡಿದರು. ಹೀಗೆ ದ್ರುಪದನು ವ್ಯವಸ್ಥೆಮಾಡಿದ ಸ್ವಯಂವರವೈಭವವನ್ನು ಏನೆಂದು ವರ್ಣಿಸಲಿ!)

